# ನಮ್ಮ ಮಲ್ಲೇಶ್ವರಂ

## My Malleshwaram










ಡಾ। ಅಶ್ವಥ್‌ನಾರಾಯಣ್ ಸಿ. ಎನ್.

ಶಾಸಕರು, ಮಲ್ಲೇಶ್ವರ, ಬೆಂಗಳೂರು

# ಮಲ್ಲೇಶ್ವರ





ಆತ್ಮೀಯ ನಾಗರಿಕರೇ,

ಪ್ರಪ್ರಥಮವಾಗಿ ನಿಮ್ಮ ಚುನಾಯಿತ ಪ್ರತಿನಿಧಿಯಾಗಿ ನನ್ನನ್ನು ಆಯ್ಕೆ ಮಾಡಿ, ನನಗೆ ಕ್ಷೇತ್ರದ ಜನರ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದಕ್ಕಾಗಿ ನಿಮಗೆಲ್ಲಾ ಅಂತರಾಳದಿಂದ ಧನ್ಯವಾದಗಳನ್ನು ಸಲ್ಲಿಸಲು ಬಯಸುತ್ತೇನೆ.

ಶುದ್ಧತೆ, ಬದ್ಧತೆ ಮತ್ತು ಅಭಿವೃದ್ಧಿ ಪರವಾಗಿರುವುದು ಮುಖಂಡನ ಲಕ್ಷಣವಾಗಿದ್ದು, ಈ ಆದರ್ಶಗಳಿಗೆ ಅನುಸಾರವಾಗಿ ನಡೆದುಕೊಳ್ಳಲು ನಾನು ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದೇನೆ. ಇದೇ ವೇಳೆ, ನಾನು ಮತದಾರರಿಗೆ ಬಯಸಿದಾಗ ಸುಲಭವಾಗಿ ಕಾಣಸಿಗುವವನಾಗಿದ್ದೇನೆ. ಮಲ್ಲೇಶ್ವರ ಕ್ಷೇತ್ರವನ್ನು ಮಾದರಿ ಕ್ಷೇತ್ರವನ್ನಾಗಿಸಬೇಕು ಎಂಬುದು ನನ್ನ ಎಡೆಬಿಡದ ಕನಸಾಗಿದೆ. ಈ ದಿಸೆಯಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ನಾನು ಮಾಡಿದ ಕಾರ್ಯಗಳನ್ನು ಈ ಪುಸ್ತಕದಲ್ಲಿ ಸಂಕ್ಷಿಪ್ತವಾಗಿ ಕೊಡಲಾಗಿದೆ.


ಕೆಲವು ಮುಖ್ಯ ವಿಷಯಗಳು ಹೀಗಿವೆ:

- ಗುಣಮಟ್ಟದ ಆರೋಗ್ಯ ಸೇವೆ ಮತ್ತು ಶಿಕ್ಷಣ ಎಲ್ಲಾ ನಾಗರಿಕರಿಗೂ ಸುಲಭದಲ್ಲಿ ಲಭ್ಯವಾಗಿಸಲು ಕ್ರಮ ಕೈಗೊಳ್ಳಲಾಗಿದೆ.
- ಸುಸ್ಥಿರ ನೀರು ನಿರ್ವಹಣೆ ಮತ್ತು ತ್ಯಾಜ್ಯ ವಿಲೇವಾರಿಗೆ ಒತ್ತು.
- ಜಿಮ್‌ಗಳು, ಉದ್ಯಾನಗಳು, ಕ್ರೀಡಾಂಗಣಗಳು, ಗ್ರಂಥಾಲಯ ಇತ್ಯಾದಿ ಕ್ರಿಯಾಶೀಲ ಸಾರ್ವಜನಿಕ ಸ್ಥಳಗಳ ಅಭಿವೃದ್ಧಿ.
- ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ಸಾರ್ವಜನಿಕರ ಅಹವಾಲು ಆಲಿಕೆ ವೇದಿಕೆ ರಚನೆ, ಸಾರ್ವಜನಿಕ ಸೇವಾ ವಿತರಣೆಗಾಗಿ ಜಿಐಎಸ್ ಸಂಯೋಜನೆ, ಆಪ್ ಮೂಲಕ ಉತ್ತಮ ಆಡಳಿತ ನೀಡುವಿಕೆ ಇನ್ನಿತರ ಕ್ರಮ ಕೈಗೊಳ್ಳಲಾಗಿದೆ.

ಭವಿಷ್ಯದ ಯೋಜನೆಗಳಿಗೆ ಸಂಬಂಧಿಸಿದಂತೆ ನಿಮ್ಮ ಬೆಂಬಲ, ಪ್ರೋತ್ಸಾಹ ಮತ್ತು ಒಳಗೊಳ್ಳುವಿಕೆಯಿಂದ ಮಲ್ಲೇಶ್ವರ ಕ್ಷೇತ್ರವನ್ನು ಅತ್ಯುತ್ತಮ ವಾಸಯೋಗ್ಯ ಪ್ರದೇಶವಾಗಿ ಮಾಡುವ ಕಾರ್ಯವನ್ನು ನಾವೆಲ್ಲರೂ ಸೇರಿ ಮುಂದುವರಿಸುತ್ತೇವೆ ಎಂಬ ಆಶಾಭಾವ ನನ್ನದಾಗಿದೆ.

ಜೈ ಕರ್ನಾಟಕ!

ವಿಶ್ವಾಸದಿಂದ



**ಡಾ। ಅಶ್ವಥ್‌ನಾರಾಯಣ್ ಸಿ. ಎನ್.**

ಶಾಸಕರು, ಮಲ್ಲೇಶ್ವರ, ಬೆಂಗಳೂರು



# ತಾಂತ್ರಿಕ ಉಪಕ್ರಮಗಳು

"ತಂತ್ರಜ್ಞಾನದಿಂದ ನಾವು ಜಗತ್ತನ್ನು ಬದಲು ಮಾಡುತ್ತಿದ್ದೇವೆ."

–ಬಿಲ್ ಗೇಟ್ಸ್

# ಮಲ್ಲೇಶ್ವರ ವಿಚಕ್ಷಣೆ

**ಯಾವುದೇ ದುಷ್ಕೃತ್ಯ ಕಣ್ಣಿಗೆ ಬೀಳದೆ ನುಸುಳಿ ಹೋಗಬಾರದು... ನಿಮ್ಮ ಸುರಕ್ಷೆ ನಮ್ಮ ಜವಾಬ್ದಾರಿ...**

- ಮಲ್ಲೇಶ್ವರದ ಎಲ್ಲಾ ವಾರ್ಡ್‌ಗಳಲ್ಲಿ ಶಿಸ್ತುಬದ್ಧ ವಿಚಕ್ಷಣೆಗಾಗಿ 450 ಸಿ. ಸಿ. ಕ್ಯಾಮೆರಾ ಜಾಲ ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ.
- ಯೋಜನೆಯ ಪ್ರಕಾರ ಈಗಾಗಲೇ ಸುಮಾರು 220 ಸಿ. ಸಿ. ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.
- ಈ ಸಿ. ಸಿ. ಕ್ಯಾಮೆರಾಗಳ ನಡುವೆ ಆಕ್ಟ್ ಫೈಬರ್ ನೆಟ್ ಮೂಲಕ ಪರಸ್ಪರ ಸಂಪರ್ಕ ಕಲ್ಪಿಸಲಾಗಿದ್ದು, ಇವುಗಳಲ್ಲಿ ಸೆರೆಯಾಗುವ ದೃಶ್ಯಗಳನ್ನು ಶಾಸಕರ ಕಚೇರಿಯಲ್ಲಿ ಸಿ. ಸಿ. ಟಿವಿ ಮೂಲಕ ಕೂಲಂಕಷವಾಗಿ ಗಮನಿಸಲಾಗುತ್ತದೆ. ನಂತರ ಹೀಗೆ ದಾಖಲಾದ ದೃಶ್ಯಗಳನ್ನು ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಮತ್ತು ಆರಕ್ಷಕ ಇಲಾಖೆಗೆ ನೀಡಲಾಗುತ್ತಿದೆ.
- ಕಸ ಬಿಸಾಕುವುದನ್ನು ತಪ್ಪಿಸುವ ಸಲುವಾಗಿ 'ಕಪ್ಪು ಚುಕ್ಕೆ' ಎಂದು ಗುರುತಿಸಲಾದ ಸ್ಥಳಗಳಲ್ಲಿ ಸಿ. ಸಿ. ಕ್ಯಾಮೆರಾಗಳನ್ನು ಅಳವಡಿಸಲು ವಿಶೇಷ ಮುತುವರ್ಜಿ ವಹಿಸಲಾಗಿದೆ.
- ಸಂಚಾರ ಪೊಲೀಸರಿಗೆ ಅನುವು ಮಾಡಿಕೊಡುವ ಉದ್ದೇಶದಿಂದ ಸಿ. ಸಿ. ಕ್ಯಾಮೆರಾಗಳನ್ನು ಪ್ರಮುಖ ವಾಹನ ದಟ್ಟಣೆಯ ಜಂಕ್ಷನ್‌ಗಳಲ್ಲಿ ಕೂಡ ಅಳವಡಿಸಲಾಗಿದೆ.





ಎಮ್. ಎಲ್. ಎ. ಕಚೇರಿ

# ಪ್ರತಿಸ್ಪಂದನಾತ್ಮಕ ಆಡಳಿತ

ನಾಗರಿಕರು ಕೇಳುವ ಪ್ರಶ್ನೆಗಳನ್ನು ನಿರ್ವಹಿಸಲು ಗ್ರಾಹಕ ಸೇವಾ ಪೋರ್ಟಲ್ ವಿನ್ಯಾಸಗೊಳಿಸಲಾಗಿದೆ.



ಎಮ್. ಎಲ್. ಎ. ಕಚೇರಿ

## ಜಿಐಎಸ್ (ಭೌಗೋಳಿಕ ಮಾಹಿತಿ ವ್ಯವಸ್ಥೆ)

**ತಂತ್ರಜ್ಞಾನವು ಉತ್ತಮ ಆಡಳಿತದ ಕೀಲಿಕೈ...**


ಸಾರ್ವಜನಿಕ ಸೇವೆಯ ಪರಿವಲಯವನ್ನು ಪರಿವರ್ತಿಸಿ ಆಡಳಿತದಲ್ಲಿ ಪಾರದರ್ಶಕತೆ ಮೂಡಿಸುವ ಉದ್ದೇಶದಿಂದ ಭೌಗೋಳಿಕ ಮಾಹಿತಿ ವ್ಯವಸ್ಥೆ ಅಳವಡಿಸಲಾಗಿದೆ.

- ಆಸ್ತಿ ತೆರಿಗೆ ಸಂಗ್ರಹದ ದಕ್ಷತೆ ಹೆಚ್ಚಿಸುವ ಜತೆಗೆ ತೆರಿಗೆ ಸುಸ್ತಿಗೆ ಕಡಿವಾಣ ಹಾಕುವುದು ಜಿಐಎಸ್ ಆಧಾರಿತ ಆಸ್ತಿ ಪತ್ತೆ ವ್ಯವಸ್ಥೆಯ ಉದ್ದೇಶವಾಗಿದೆ.

- ಸಮಗ್ರ ರಸ್ತೆ ಇತಿಹಾಸ ಅನುಸರಣಾ ವ್ಯವಸ್ಥೆಯು ರಾಜಧಾನಿಯ ಸುಧಾರಣೆ ಮತ್ತು ನಿರ್ವಹಣಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಹತ್ವದ ಸಾಧನವಾಗಿ ಪರಿಣಮಿಸಿದೆ.

- ನೀರು ಪೂರೈಕೆ ಮತ್ತು ಒಳಚರಂಡಿ ಮೂಲಸೌಕರ್ಯ ನಿರ್ವಹಣೆಗಾಗಿ ಸಿದ್ಧಪಡಿಸಿರುವ ಜಿಐಎಸ್ ಆಧಾರಿತ 'ಇ-ಕಾವೇರಿ'ಯು ಸೋರಿಕೆ ತಡೆಗಟ್ಟಿ ಲೆಕ್ಕಕ್ಕೆ ಸಿಗದ ನೀರಿನ ಪೂರೈಕೆ ಪ್ರಮಾಣವನ್ನು ತಗ್ಗಿಸಿದೆ.

---




## ಮಲ್ಲೇಶ್ವರಂಸಹಾಯ

**ನಿಮ್ಮ ಅಹವಾಲು ತಿಳಿಯುವುದು ಬಲು ಮುಖ್ಯ... ನಿಮ್ಮ ಸಮಸ್ಯೆ ಆಲಿಸಿ, ಪರಿಹರಿಸಲು ನಾವಿದ್ದೇವೆ...**

ವಿವಿಧ ಸಾರ್ವಜನಿಕ ಸಂಸ್ಥೆಗಳ ನಡುವೆ ಸಮನ್ವಯತೆ ಮತ್ತು ಪಾರದರ್ಶಕತೆ ಮೂಡಿಸುವ ಸಲುವಾಗಿ ನಾಗರಿಕ ಕೇಂದ್ರಿತವಾದ MalleshwaramSahaaya ಎಂಬ ಆಪ್ ಸಿದ್ಧಪಡಿಸಲಾಗಿದೆ.

2013ರಿಂದ 2018ರ ಮಾರ್ಚ್ ಅವಧಿಯವರೆಗಿನ ಅಂಕಿ ಅಚಿಶ.

**ಬಂದಿರುವ ದೂರುಗಳು - 2199**

**ನಿಯೋಜಿತ ದೂರುಗಳು - 293**

**ವಿಚಾರಣೆ ಪ್ರಗತಿಯಲ್ಲಿರುವುದು - 57**

**ಪರಿಹಾರ ಒದಗಿಸಿರುವುದು - 1725**

**ತಿರಸ್ಕೃತ ದೂರುಗಳು - 124**

**10,000ಕ್ಕೂ ಹೆಚ್ಚು ಸಕ್ರಿಯ MalleshwaramSahaaya ಬಳಕೆದಾರರು**



# ತಂತ್ರಜ್ಞಾನದ ಮೂಲಕ ಜನರೊಂದಿಗೆ ಸಂಪರ್ಕ




- ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರು ಸಾಮಾಜಿಕ ಜಾಲತಾಣಗಳಾದ ಫೇಸ್‌ಬುಕ್, ಟ್ವಿಟರ್ ಮತ್ತು ಇನ್‌ಸ್ಟಾಗ್ರಾಮ್ ಮೂಲಕ ಉತ್ತಮ ಸಂವಹನ ನಡೆಸುತ್ತಿದ್ದು ಜನರೊಂದಿಗೆ ಸಕ್ರಿಯವಾಗಿ ಭಾಗಿಯಾಗಿದ್ದಾರೆ.

- Mymalleshwaram, Draswathnarayan ಮತ್ತು Malleshwaramsportsfoundation ಗಳ ಮೂಲಕ 5 ಲಕ್ಷಕ್ಕೂ ಹೆಚ್ಚು ಅನುಯಾಯಿಗಳನ್ನು (ಫಾಲೋವರ್ಸ್‌ಗಳನ್ನು) ಹೊಂದಿದ್ದಾರೆ.

- ವಿವಿಧ ಅಭಿವೃದ್ಧಿ ಕಾಮಗಾರಿಗಳು ಮತ್ತು ಇಡೀ ಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ 65 ಸಾವಿರಕ್ಕೂ ಹೆಚ್ಚು ಜನರಿಗೆ ಖುದ್ದಾಗಿ ಇ–ಮೇಲ್ ಮತ್ತು ಎಸ್‌ಎಂಎಸ್ ಗಳನ್ನು ಕಳುಹಿಸಲಾಗುತ್ತಿದೆ.

**ಡೌನ್‌ಲೋಡ್ ಮಾಡಿ**

Available on the App Store

ANDROID APP ON Google play













# ನೀರು ನಿರ್ವಹಣೆ

“21ನೇ ಶತಮಾನದಲ್ಲಿ ಯುದ್ಧಗಳು ನೀರಿಗಾಗಿ ನಡೆಯಲಿವೆ.”

–ಇಸ್ಮಾಯಿಲ್ ಸೆರಾಗಿಲ್ಡಿನ್

## ನೀರು ನಿರ್ವಹಣೆ

ನೀರಿನ ಸಂರಕ್ಷಣೆ ಮತ್ತು ನೀರಿನ ಕೊರತೆ ನೀಗುವಲ್ಲಿ ಮಳೆ ನೀರು ಕೊಯ್ಲಿನ ಮಹತ್ವವನ್ನು ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರು ಸ್ಪಷ್ಟವಾಗಿ ಮನಗಂಡಿದ್ದಾರೆ. ಸ್ವತಃ ಮುತುವರ್ಜಿ ವಹಿಸಿ ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಶಾಲೆಗಳು, ಉದ್ಯಾನವನಗಳು ಮತ್ತು ಕ್ರೀಡಾಂಗಣಗಳಲ್ಲಿ ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಸಿದ್ದಾರೆ. ಧೋಬಿ ಘಾಟ್‌ನಲ್ಲಿನ ನೀರು ಸಂಗ್ರಹಣಾ ಸಾಮರ್ಥ್ಯವು ಅವರ ಪ್ರಯತ್ನಕ್ಕೆ ಒಂದು ಅತ್ಯುತ್ತಮ ಉದಾಹರಣೆಯಾಗಿದೆ.


ಮತ್ತಿಕೆರೆ ನೇತಾಜಿ ವೃತ್ತ

## 'ಲೆಕ್ಕಕ್ಕೆ ಸಿಗದ ನೀರು' (ಯುಎಫ್‌ಡಬ್ಲ್ಯು)

ಅನ್‌ಅಕೌಂಟೆಡ್ ಫಾರ್ ವಾಟರ್– ಲೆಕ್ಕಕ್ಕೆ ಸಿಗದ ನೀರು: ಈ ಪ್ರಮಾಣವು. ಒದಗಿಸಲಾಗುವ ಒಟ್ಟು ನೀರು ಹಾಗೂ ಕ್ರಮಬದ್ಧವಾಗಿ ಬಳಕೆಯಾದ ನೀರಿನ ವ್ಯತ್ಯಾಸವನ್ನು ಪ್ರತಿನಿಧಿಸುತ್ತದೆ.

ಕಳಪೆ ದರ್ಜೆಯ ಮೂಲಸೌಕರ್ಯ, ಸೋರಿಕೆ ಮತ್ತು ಅಕ್ರಮ ಬಳಕೆಯಿಂದಾಗಿ ಯುಎಫ್‌ಡಬ್ಲ್ಯು ಅಧಿಕವಾಗುತ್ತದೆ.

| ಒಟ್ಟು ಎಂಎಲ್‌ಎಂ ಗೆ | 2014ರ ಆರಂಭ | 2017ರ ಡಿಸೆಂಬರ್ ಅನ್ವಯ |
|---|---|---|
| ಬಳಕೆ– ದಶಲಕ್ಷ ಲೀಟರ್ (ಎಂಎಲ್) | 474.44 | 498.83 |
| ಇತರೆ ಉದ್ದೇಶಗಳು – ದಶಲಕ್ಷ ಲೀಟರ್ (ಎಂಎಲ್) | 4.50 | 9.008 |
| ಯುಎಫ್‌ಡಬ್ಲ್ಯು – ದಶಲಕ್ಷ ಲೀಟರ್ (ಎಂಎಲ್) | 391.61 | 232.994 |
| **ಯುಎಫ್‌ಡಬ್ಲ್ಯು %** | **46.29%** | **29%** |

- ಮನೆಗಳಿಗೆ ಸಂಪರ್ಕ ಕಲ್ಪಿಸುವ ಪೈಪುಗಳ ಬದಲಾವಣೆ – ಒಟ್ಟು 30,530 ಮನೆಗಳ ಪೈಕಿ 24,372 ಮನೆಗಳ ಪೈಪುಗಳನ್ನು ಬದಲಾಯಿಸಲಾಗಿದೆ.
- ಸೋರಿಕೆ ತಡೆಗಟ್ಟಿರುವ ಪ್ರಕರಣಗಳು – 3132.

**ಯುಎಫ್‌ಡಬ್ಲ್ಯು ಪ್ರಮಾಣ ಕಡಿಮೆ ಆಗುವುದರಿಂದ ಸಿಗುವ ಕೆಲವು ಲಾಭಗಳು ಹೀಗಿವೆ:**

- ಯುಎಫ್‌ಡಬ್ಲ್ಯು ಕಡಿಮೆ ಎಂದರೆ ನಷ್ಟದ ಪ್ರಮಾಣ ಅಥವಾ ಅಮೂಲ್ಯ ಸಂಪನ್ಮೂಲದ ನಷ್ಟ ಇಳಿಮುಖವಾಗಿದೆ ಎಂದು ಅರ್ಥ.
- ಯುಎಫ್‌ಡಬ್ಲ್ಯು ಕಡಿಮೆ ಎಂದರೆ ಅಗತ್ಯವಿರುವವರಿಗೆ ಹೆಚ್ಚು ನೀರು ಲಭ್ಯವಾಗುತ್ತದೆ ಎಂದು ಅರ್ಥ.
- ನೀರಿನ ಬೆಲೆಯ ಜತೆಗೆ ಅದರ ಸಂಸ್ಕರಣೆ ಮತ್ತು ಪೂರೈಕೆಗೆ ವೆಚ್ಚ ತಗುಲುತ್ತದೆ. ಯುಎಫ್‌ಡಬ್ಲ್ಯು ತಗ್ಗಿದೆ ಎಂದರೆ ಈ ವೆಚ್ಚದಲ್ಲೂ ಇಳಿಕೆಯಾಗಿದೆ ಎಂದು ಅರ್ಥ.
- ಇದರಿಂದ ಹೆಚ್ಚಿನ ಆದಾಯ ಮತ್ತು ನಿಖರ ಅಂಕಿಅಂಶ ಲಭ್ಯವಾಗುತ್ತದೆ.




# ಧೋಬಿ ಘಾಟ್ ಆಧುನೀಕರಣ

"ಬಟ್ಟೆ ತೊಳೆಯುವ ಸಂದರ್ಭದಲ್ಲಿ ಮಾತ್ರ ಬಣ್ಣಗಳನ್ನು ಪ್ರತ್ಯೇಕವೆಂದು ನೋಡಬೇಕು."

–ಅನಾನಿಮಸ್

# ಆಧುನೀಕರಣಗೊಂಡ ಧೋಬಿ ಘಾಟ್

ಬೆಂಗಳೂರಿನ ಅತ್ಯಂತ ದೊಡ್ಡ ಬಟ್ಟೆ ತೊಳೆಯುವ ತಾಣಗಳಲ್ಲಿ ಒಂದಾದ ಧೋಬಿ ಘಾಟ್ 400ಕ್ಕೂ ಹೆಚ್ಚು ಕುಟುಂಬಗಳ ಜೀವನೋಪಾಯಕ್ಕೆ ನೆರವಾಗುವ ರೀತಿಯಲ್ಲಿ ಪರಿವರ್ತನೆ ಕಂಡು ಆಧುನೀಕರಣ ಗೊಂಡಿದೆ. ಪ್ರಸ್ತುತ, ಈ ಘಾಟ್‌ನಲ್ಲಿ 5 ವಾಷಿಂಗ್ ಮಷೀನ್‌ಗಳು, 4 ನೀರು ಸೆಳೆಯುವ ಯಂತ್ರಗಳು (ಹೈಡ್ರೋ ಎಕ್ಸ್‌ಟ್ರ್ಯಾಕ್ಟರ್ಸ್), 7 ಡ್ರೈಯರ್‌ಗಳು, ಒಂದು ಬಾಯ್ಲರ್ ಮತ್ತು 2 ಕ್ಯಾಲೆಂಡರ್ ಐರನಿಂಗ್ ಯಂತ್ರಗಳನ್ನು ಅಳವಡಿಸಲಾಗಿದೆ. ಈಗ ಮಲ್ಲೇಶ್ವರದ ಧೋಬಿ ಘಾಟ್ ದೇಶದಲ್ಲೇ ಮಾದರಿಯಾಗಿದೆ.



ಮುಂಚೆ



ನಂತರ



ನಂತರ




# ಸೇವಾ ಕೇಂದ್ರ

"ದೋಷವನ್ನು ಹುಡುಕಬೇಡಿ. ಪರಿಹಾರವನ್ನು ಶೋಧಿಸಿ."
–ಹೆನ್ರಿ ಫೋರ್ಡ್

# ಸೇವಾ ಕೇಂದ್ರ

ನಾಗರಿಕರಿಗೆ ವಿವಿಧ ಸೇವೆಗಳನ್ನು ಅನಗತ್ಯ ಅಡೆತಡೆಗಳಿಲ್ಲದಂತೆ ಸುಲಲಿತವಾಗಿ ಒಂದೇ ಸೂರಿನಡಿ ಲಭ್ಯವಾಗಿಸಲು ಮಲ್ಲೇಶ್ವರದಲ್ಲಿ ಸೇವಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಸೇವಾ ಕೇಂದ್ರದಲ್ಲಿ ಆರೋಗ್ಯ ಸೇವೆ, ಜಿಮ್ನ್ಯಾಷಿಯಂ, ಗ್ರಂಥಾಲಯ, ಹಗಲು ಆರೈಕೆ ಕೇಂದ್ರ, ಪಾಲಿಕೆ ಸದಸ್ಯರ ಕಚೇರಿ, ಸ್ಥಳೀಯ ಬಿಬಿಎಂಪಿ ಕಂದಾಯ ಮತ್ತು ಎಂಜಿನಿಯರಿಂಗ್ ವಿಭಾಗಗಳು ಕಾರ್ಯನಿರ್ವಹಿಸುತ್ತಿವೆ.

**ಹಿರಿಯರ ಹಗಲು ಆರೈಕೆ ಕೇಂದ್ರಗಳು:**
ಹಿರಿಯರ ಹಗಲು ಆರೈಕೆ ಕೇಂದ್ರವು ಹಿರಿಯ ನಾಗರಿಕರಿಗೆ ಸೌಲಭ್ಯಗಳನ್ನು ಒದಗಿಸುತ್ತಿದ್ದು ಅವರನ್ನು ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿರುವಂತೆ ಮಾಡುತ್ತಿದೆ.



ಸೇವಾ ಕೇಂದ್ರ, ಗಾಯತ್ರಿ ನಗರ



ನಾಡ ಕಚೇರಿ, ವಾರ್ಡ್ 65



ಬೆಂಗಳೂರು – ಒನ್, ವಾರ್ಡ್ 65



ಎಂಒಎಚ್ ಕಚೇರಿ, ಮಲ್ಲೇಶ್ವರಂ, ವಾರ್ಡ್ 65

# ಜಿಮ್ನ್ಯಾಷಿಯಂ

**"ನೀವು ನಿಮ್ಮ ದೇಹದ ಬಗ್ಗೆ ಜಾಗ್ರತೆ ವಹಿಸಬೇಕೆಂದಾದರೆ, ನಿಮ್ಮ ದೇಹದ ಮೂಲಕವೇ ಸಕ್ರಿಯವಾಗಿರಬೇಕು"– ಜಿಮ್ ರಾಹ್ನ್**

ಆರೋಗ್ಯಕರ ಜೀವನ ಶೈಲಿಯನ್ನು ಪ್ರೋತ್ಸಾಹಿಸಲು ಮಲ್ಲೇಶ್ವರನಲ್ಲಿ ಬಿ.ಬಿ.ಎಂ.ಪಿ. ನಿರ್ವಹಿಸುತ್ತಿರುವ ಒಂಬತ್ತಕಿಂತ ಹೆಚ್ಚು ಜಿಮ್‌ಗಳಲ್ಲಿ ಆಧುನಿಕ ಶೈಲಿಯ ಉಪಕರಣಗಳನ್ನು ಅಳವಡಿಸಲಾಗಿದೆ. ಈ ಸೌಲಭ್ಯವನ್ನು ನಾಗರಿಕರಿಗೆ ಅತಿ ಕಡಿಮೆ ಶುಲ್ಕದಲ್ಲಿ ನೀಡಲಾಗುತ್ತಿದೆ.



ಸುಬ್ರಮಣ್ಯನಗರ



ಚಂದ್ರಶೇಖರ ಆಜಾದ್ ಮೈದಾನ



ಡಾ. ಶಿವಪ್ರಸಾದ್ ಉದ್ಯಾನ, ಅಶ್ವಥ್ ನಗರ

**17**
ಹೊರಾಂಗಣ ಜಿಮ್‌ಗಳು

**9**
ಒಳಾಂಗಣ ಜಿಮ್‌ಗಳು
(ಹಾಲಿ ಕಾರ್ಯನಿರ್ವಹಿಸುತ್ತಿವೆ)

**1**
ಒಳಾಂಗಣ ಜಿಮ್
(ನಿರ್ಮಾಣ ಕಾರ್ಯ ನಡೆಯುತ್ತಿದೆ)

# ಗ್ರಂಥಾಲಯ

ಮಲ್ಲೇಶ್ವರಂ ನಿವಾಸಿಗಳಿಗಾಗಿ ಕನ್ನಡ ಮತ್ತು ಇಂಗ್ಲಿಷ್ ಪುಸ್ತಕಗಳು ಹಾಗೂ ನಿಯತಕಾಲಿಕಗಳಿಂದ ಕೂಡಿದ ಸುಸಜ್ಜಿತ ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದ್ದು, ಅವುಗಳು ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿವೆ.

**10**
ಗ್ರಂಥಾಲಯಗಳು

**5,88,490**
ಪುಸ್ತಕಗಳು

| ವಾರ್ಡ್ | ಹೆಸರು | ಪುಸ್ತಕಗಳ ಸಂಖ್ಯೆ |
|---|---|---|
| 35 | ಅರಮನೆ ನಗರ | 15,760 |
| 36 | ಮತ್ತೀಕೆರೆ | 20,585 |
| 45 | ಯಶವಂತಪುರ | 1,22,831 |
| 64 | ರಾಜಾಮಹಲ್ ನಗರ | 1,23,455 |
| 65 | ಕಾಡುಮಲ್ಲೇಶ್ವರ | 2,63,893 |
| 66 | ಸುಬ್ರಮಣ್ಯನಗರ | 25,106 |
| 76 | ಗಾಯತ್ರಿನಗರ | 16,860 |



ಮಹಾಕವಿ ಕುವೆಂಪು ರಸ್ತೆ, ವಾರ್ಡ್ 65



ಓದುವ ತಾಣ, ಮಹಾಕವಿ ಕುವೆಂಪು ರಸ್ತೆ



# ಆರೋಗ್ಯ ಮತ್ತ ಸ್ವಾಸ್ಥ್ಯ

"ಶರೀರದ ಆರೋಗ್ಯವನ್ನು ಉತ್ತಮವಾಗಿ ಇರಿಸಿಕೊಳ್ಳುವುದು ಒಂದು ಕರ್ತವ್ಯ.
ಇಲ್ಲದಿದ್ದರೆ ನಮ್ಮ ಮನಸ್ಸನ್ನು ಸದೃಢ ಮತ್ತು ಸ್ಪಷ್ಟತೆಯೊಂದಿಗೆ ಇರಿಸಿಕೊಳ್ಳಲು ಸಾಧ್ಯವಾಗದು."
– ಬುದ್ಧ

# ಆರೋಗ್ಯ ಮತ್ತು ಸ್ವಾಸ್ಥ್ಯ

ಸ್ವತಃ ಆರೋಗ್ಯ ಸೇವಾ ಹಿನ್ನೆಲೆ ಹೊಂದಿರುವ ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರು ಮಲ್ಲೇಶ್ವರದ ನಾಗರಿಕರಿಗೆ ಆರೋಗ್ಯಕರ ಪರಿಸರ ಮತ್ತು ಗುಣಮಟ್ಟದ ಆರೋಗ್ಯ ಸೇವೆ ಲಭ್ಯವಾಗಿಸಲು ಆದ್ಯತೆ ನೀಡಿದ್ದಾರೆ.

• ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಅತ್ಯಾಧುನಿಕ ಬಿಬಿಎಂಪಿ ವಾಸವಿ ಡಯಾಲಿಸಿಸ್ ಕೇಂದ್ರ ಸ್ಥಾಪನೆಗೆ ಚಾಲನೆ ನೀಡುವ ಮೂಲಕ ಗಂಭೀರ ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಉತ್ಕೃಷ್ಟ ಗುಣಮಟ್ಟದ ಸೇವೆ ಲಭ್ಯವಾಗುವಂತೆ ಮಾಡಲಾಗಿದೆ.

• ಕಳೆದ ಐದು ವರ್ಷಗಳ ಅವಧಿಯಲ್ಲಿ ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರು 100ಕ್ಕೂ ಹೆಚ್ಚು ವೈದ್ಯಕೀಯ ಶಿಬಿರಗಳನ್ನು ಆಯೋಜಿಸಿದ್ದು, ಇದರಿಂದ 75,000ಕ್ಕೂ ಹೆಚ್ಚು ಜನ ಪ್ರಯೋಜನ ಪಡೆದಿದ್ದಾರೆ.

# ಆರೋಗ್ಯ ಕೇಂದ್ರಗಳು

| ವಾರ್ಡ್ | ಮಾದರಿ | ಆರೋಗ್ಯ ಕೇಂದ್ರಗಳು |
|---|---|---|
| 35 | ಕಿಯೋಸ್ಕ್ | ಡಾ. ಶಿವಪ್ರಸಾದ್ ಉದ್ಯಾನ, ಅಶ್ವತ್ಥನಗರ |
| 35 | ಕಿಯೋಸ್ಕ್ | ಸೇವಾ ಕೇಂದ್ರ, ಜನತಾ ಬಜಾರ್, ಸದಾಶಿವನಗರ |
| 36 | ಯುಪಿಎಚ್‌ಸಿ | ಬಿಬಿಎಂಪಿ ಸೇವಾ ಕೇಂದ್ರ, ಮತ್ತಿಕೆರೆ |
| 36 | ಕಿಯೋಸ್ಕ್ | ಅಟಲ್‌ಜಿ ಉದ್ಯಾನ, ದಿವಾನರ ಪಾಳ್ಯ |
| 45 | ಯುಪಿಎಚ್‌ಸಿ | ಸರ್ಕಾರಿ ಶಾಲೆ, ಸುಬೇದಾರ್ ಪಾಳ್ಯ |
| 64 | *ಹೆರಿಗೆ ಆಸ್ಪತ್ರೆ | ಗುಟ್ಟಹಳ್ಳಿ ಸರ್ಕಲ್ |
| 64 | ಕಿಯೋಸ್ಕ್ | 10ನೇ ಕ್ರಾಸ್, ಎಸ್‌ಪಿ ಬಡಾವಣೆ |
| 64 | ಪಿಎಚ್‌ಸಿ | ರಾಜಾಮಹಲ್ ನಗರ |
| 65 | *ಯುಪಿಎಚ್‌ಸಿ | ಗಾಂಧಿ ಗ್ರಾಮ |
| 65 | ಕಿಯೋಸ್ಕ್ | ಧೋಬಿ ಘಾಟ್, ವಯ್ಯಾಲಿಕಾವಲ್ |
| 76 | ಯುಪಿಎಚ್‌ಸಿ | ನಾಗಪ್ಪ ಬ್ಲಾಕ್, ಲಕ್ಷ್ಮೀನಾರಾಯಣಪುರ (ಎಲ್‌ಎನ್ ಪುರ) |
| | *ಕೆ.ಸಿ.ಜನರಲ್ ಆಸ್ಪತ್ರೆ | ಮಲ್ಲೇಶ್ವರಂ ಸರ್ಕಲ್ |

* 2008ಕ್ಕಿಂತ ಮುಂಚೆ ಸ್ಥಾಪನೆಯಾದ ಕೇಂದ್ರಗಳು



ವಾಸವಿ ಡಯಾಲಿಸಿಸ್ – ಪ್ಯಾಲೆಸ್ ಗುಟ್ಟಹಳ್ಳಿ



ಪ್ರಯೋಗಾಲಯ, ಪ್ಯಾಲೆಸ್ ಗುಟ್ಟಹಳ್ಳಿ



ಔಷಧ ಉಗ್ರಾಣ



ಹೆರಿಗೆ ಆಸ್ಪತ್ರೆ



ವಾಸವಿ ಡಯಾಲಿಸಿಸ್ ಕೇಂದ್ರ



# ಶಿಕ್ಷಣ

“ಜ್ಞಾನದ ಮೇಲೆ ಹೂಡುವ ಬಂಡವಾಳವು ಅತ್ಯಧಿಕ ಬಡ್ಡಿ ನೀಡುತ್ತದೆ.”

–ಬೆಂಜಮಿನ್ ಫ್ರಾಂಕ್ಲಿನ್

# ಶಿಕ್ಷಣ

• ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರು ಕ್ಷೇತ್ರದಲ್ಲಿ ಜನಸಾಮಾನ್ಯರಿಗೆ ಗುಣಮಟ್ಟದ ಹಾಗೂ ಸಮಗ್ರ ಶಿಕ್ಷಣ ನೀಡಲು ಕಟಿಬದ್ಧರಾಗಿದ್ದಾರೆ.

• ಸರ್ಕಾರಿ ಮತ್ತು ಖಾಸಗಿ ಶಾಲೆಗಳ ಅಂತರವನ್ನು ತಗ್ಗಿಸುವ ಸಲುವಾಗಿ ಪ್ರಯೋಗಾಲಯಗಳ ಸ್ಥಾಪನೆ, ಕ್ರೀಡಾ ಸವಲತ್ತುಗಳು ಮತ್ತು ಶಾಲೆಗಳಲ್ಲಿ ಡಿಜಿಟಲ್ ಗ್ರಂಥಾಲಯ ಸ್ಥಾಪನೆ ಪ್ರೇರೇಪಿಸುತ್ತಿದ್ದಾರೆ.

• ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಫೌಂಡೇಷನ್ ಮೂಲಕ ಐದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ **ವಿದ್ಯಾರ್ಥಿ ವೇತನ** ಮಂಜೂರು ಮಾಡಲಾಗಿದೆ.

• **ಶಿಕ್ಷಣ ಪ್ರತಿಷ್ಠಾನದ** ಮೂಲಕ ಮಲ್ಲೇಶ್ವರಂ ಕ್ಷೇತ್ರ ವ್ಯಾಪ್ತಿಯ 13 ಸರ್ಕಾರಿ ಶಾಲೆಗಳಲ್ಲಿ ಡಿಜಿಟಲ್ ಗ್ರಂಥಾಲಯಗಳನ್ನು ಸ್ಥಾಪಿಸಿ, ಕೊಠಡಿಗಳಲ್ಲಿ ತಂತ್ರಜ್ಞಾನದ ನೆರವಿನಿಂದ ಕಲಿಕಾ ಸೌಲಭ್ಯ ಕಲ್ಪಿಸಲಾಗಿದೆ.

• ಪ್ರತಿ ವರ್ಷ **ಶಿಕ್ಷಕರ ದಿನಾಚರಣೆಯಂದು** ಸಂಭ್ರಮದ ಕಾರ್ಯಕ್ರಮ ಏರ್ಪಡಿಸಿ ಶಿಕ್ಷಕರ ಕೊಡುಗೆ ಮತ್ತು ಪರಿಶ್ರಮ ಗುರುತಿಸಿ ಸನ್ಮಾನಿಸಲಾಗುತ್ತದೆ.



ಮೊದಲು



ಮಾಂತೆಸ್ಸೋರಿ ಮಾದರಿಯಲ್ಲಿ ಅಂಗನವಾಡಿ ಕೇಂದ್ರ ಅಭಿವೃದ್ಧಿ (ನಂತರ)





ಬೇಸಿಗೆ ಶಿಬಿರ



ಸರ್ಕಾರಿ ಶಾಲೆ, ಪ್ಯಾಲೆಸ್ ಗುಟ್ಟಹಳ್ಳಿ




ಸರ್ಕಾರಿ ಶಾಲೆ, ಸಂಜೀವಪ್ಪ ಕಾಲೊನಿ



ವಿದ್ಯಾರ್ಥಿಗಳಿಗೆ 'ಪರ್ಯಾಯ ವಾಸ್ತವ'ದ (ವರ್ಚ್ಯುಯಲ್ ರಿಯಾಲಿಟಿ) ಅನುಭವ
ಸರ್ಕಾರಿ ಹೆಣ್ಣು ಮಕ್ಕಳ ಪ್ರೌಢ ಶಾಲೆ, 13ನೇ ಕ್ರಾಸ್, ಮಲ್ಲೇಶ್ವರ



ಶಿಕ್ಷಕರ ದಿನಾಚರಣೆ ಕಾರ್ಯಕ್ರಮ




# ಕ್ರೀಡೆ

“ಕ್ರೀಡಾಪಟುಗಳು ಯುವಜನತೆಯೊಂದಿಗೆ ಅವರಿಗೆ ಅರ್ಥವಾಗುವ ರೀತಿಯಲ್ಲಿ ಮಾತನಾಡುತ್ತಾರೆ.”

–ನೆಲ್ಸನ್ ಮಂಡೇಲಾ

# ಕ್ರೀಡೆ

ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರು ಅಪ್ಪಟ ಕ್ರೀಡಾಪ್ರೇಮಿಯಾಗಿದ್ದು, ಆಟೋಟಗಳ ಹವ್ಯಾಸ ಆರೋಗ್ಯಕ್ಕೆತುಂಬಾ ಲಾಭದಾಯಕ ಎಂಬುದನ್ನು ದೃಢವಾಗಿ ನಂಬಿದ್ದಾರೆ. ಮಲ್ಲೇಶ್ವರಂ ಕ್ಷೇತ್ರದೆಲ್ಲೆಡೆ ಕ್ರೀಡಾ ಮತ್ತು ಮನರಂಜನಾ ಸೌಲಭ್ಯಗಳ ಸುಧಾರಣೆಗಾಗಿ ಮುಂಚೂಣಿಯಲ್ಲಿ ನಿಂತು ಮುನ್ನಡೆಸುತ್ತಿದ್ದಾರೆ. ಎಲ್ಲಾ ಬಗೆಯ ಕ್ರೀಡಾ ಸಂಬಂಧಿ ಚಟುವಟಿಕೆಗಳಿಗೆ ಅನುವು ಮಾಡಿಕೊಡುವ ಸಲುವಾಗಿ ಮಲ್ಲೇಶ್ವರ ಸ್ಪೋರ್ಟ್ಸ್ ಫೌಂಡೇಷನ್ ಸ್ಥಾಪಿಸಲಾಗಿದೆ.





ಮಲ್ಲೇಶ್ವರಂ ಕ್ರೀಡಾಂಗಣ







ಬಿಬಿಎಂಪಿ ಬೀಗಲ್ಸ್ ಒಳಾಂಗಣ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣ



ಮಲ್ಲೇಶ್ವರಂ ಕ್ರೀಡಾಂಗಣ



ಬಿಬಿಎಂಪಿ ಬೀಗಲ್ಸ್ ಒಳಾಂಗಣ ಬ್ಯಾಸ್ಕೆಟ್‌ಬಾಲ್ ಕ್ರೀಡಾಂಗಣ, 15ನೇ ಕ್ರಾಸ್ ಮಲ್ಲೇಶ್ವರಂ




# ಘನತ್ಯಾಜ್ಯ ನಿರ್ವಹಣಾ ಯೋಜನೆ

“ಸ್ವಚ್ಛರಹಿತ ನಗರದಲ್ಲಿ ಸ್ವಚ್ಛ ಶರೀರ ನೆಲೆಸಲು ಸಾಧ್ಯವಿಲ್ಲ.”
–ಮಹಾತ್ಮ ಗಾಂಧೀಜಿ

# ಘನತ್ಯಾಜ್ಯ ನಿರ್ವಹಣಾ ಯೋಜನೆ

**ಸ್ಮಾರ್ಟ್– ಸ್ವಚ್ಛ ಮಲ್ಲೇಶ್ವರ–**
**ನೀವು ಬದುಕಲು ಇಚ್ಛಿಸುವ ಸ್ವಚ್ಛ ಮತ್ತು ಕಸರಹಿತ ನೆರೆಹೊರೆ**

- ಪ್ರಸಕ್ತ, ಮಲ್ಲೇಶ್ವರ ಅತ್ಯಂತ ಬೇಡಿಕೆಯ ಪ್ರದೇಶವಾಗಿದ್ದು, ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರ ನಾಯಕತ್ವದಲ್ಲಿ ನಾಗರಿಕರ ಪರಿಶ್ರಮದಿಂದಾಗಿ "ಕಪ್ಪು ಚುಕ್ಕಿ ರಹಿತ" ಪ್ರದೇಶ ಎಂದು ಘೋಷಿತವಾಗಿದೆ.
- ಘನತ್ಯಾಜ್ಯ ವಿಲೇವಾರಿಯ ಸಂಪೂರ್ಣ ವಿಲೇವಾರಿಗೆ ಸಂಬಂಧಿಸಿದಂತೆ ಮಲ್ಲೇಶ್ವರ ಕ್ಷೇತ್ರದಲ್ಲಿ ಬಹುಮುಖಿ ಪರಿಹಾರೋಪಾಯ ಅನುಸರಿಸಲಾಗುತ್ತಿದೆ. ಇದಕ್ಕಾಗಿ ಕ್ಷೇತ್ರ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಒಣಕಸ ಸಂಗ್ರಹ ಕೇಂದ್ರಗಳನ್ನು, ಹಸಿ ತ್ಯಾಜ್ಯ ನಿರ್ವಹಣೆಗಾಗಿ ಸಾವಯವ ಕಾಂಪೋಸ್ಟ್ ತಯಾರಿಕಾ ಘಟಕ ಮತ್ತು 50ಕ್ಕೂ ಹೆಚ್ಚು ಬೀದಿದೀಪಗಳಿಗೆ ವಿದ್ಯುತ್ ಪೂರೈಸುತ್ತಿರುವ ಜೈವಿಕ ಅನಿಲ ಘಟಕ ಸ್ಥಾಪಿಸಲಾಗಿದೆ.
- ರಸ್ತೆ ಮೇಲೆ ಕಸ ಸುರಿಯದಿರುವುದನ್ನು ಖಾತ್ರಿಗೊಳಿಸುವ ಸಲುವಾಗಿ ಮನೆ ಮನೆ ಬಾಗಿಲಿಗೆ ತೆರಳಿ ಕಸ ಸಂಗ್ರಹಿಸುವಿಕೆಯನ್ನು ಬ್ಲಾಕ್ ಮಟ್ಟದ ಸ್ಮಾರ್ಟ್ ಸಂಗ್ರಹದೊಂದಿಗೆ ಸಂಯೋಜನೆಗೊಳಿಸಿ ಲಾರಿ ಇರುವೆಡೆಗೆ ಸಾಗಿಸಲಾಗುತ್ತಿದೆ.
- ಈ ಬಹುಬಗೆಯ ತ್ಯಾಜ್ಯ ನಿರ್ವಹಣಾ ಕ್ರಮಗಳಿಂದಾಗಿ ಹೊಂಡಕ್ಕೆ ಸುರಿಯಲು ಹೋಗುತ್ತಿರುವ ಕಸದ ಪ್ರಮಾಣ ತೀವ್ರವಾಗಿ ತಗ್ಗಿದೆ.



ಚಿತ್ರನಟ ಯಶ್, ಸ್ಮಾರ್ಟ್ ಸ್ವಚ್ಛ ಮಲ್ಲೇಶ್ವರ ಬ್ರ್ಯಾಂಡ್ ರಾಯಭಾರಿ


ಜೈವಿಕ ಮೀಥೇನೀಕರಣ ಘಟಕ, ಎಂಎಸ್‌ಆರ್ ರಸ್ತೆ, ಸುಬೇದಾರ್ ಪಾಳ್ಯ





ಮೊದಲು ತ್ರಿವೇಣಿ ರಸ್ತೆ, ವೆಂಕಟೇಶ್ವರ ಕಲ್ಯಾಣ ಮಂಟಪ ನಂತರ

## ಸಾರ್ವಜನಿಕ ಶೌಚಾಲಯಗಳು

ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯಲ್ಲಿ ಅಸ್ತಿತ್ವದಲ್ಲಿರುವ 36 ಸಾರ್ವಜನಿಕ ಶೌಚಾಲಯಗಳನ್ನು ಜನರ ಅನುಕೂಲಕ್ಕಾಗಿ ಸುಧಾರಿತ ದರ್ಜೆಗೇರಿಸಿ ಸೂಕ್ತವಾಗಿ ನಿರ್ವಹಣೆ ಮಾಡಲಾಗುತ್ತಿದೆ.



ಯಶವಂತಪುರ ಸರ್ಕಲ್



ಲೋವರ್ ಪ್ಯಾಲೆಸ್ ಆರ್ಚಿಡ್ಸ್, ವಯ್ಯಾಲಿಕಾವಲ್

## ವಿದ್ಯಾರ್ಥಿಗಳಿಗೆ ಮನವರಿಕೆ

ಘನ ತ್ಯಾಜ್ಯ ವಿಲೇವಾರಿ ನಿರ್ವಹಣಾ ತತ್ವಗಳ ಕುರಿತು ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಿ ತ್ಯಾಜ್ಯ ವಿಲೇವಾರಿಯ ಹವ್ಯಾಸ ಮೂಡಿಸುವ ಸಲುವಾಗಿ ವಿದ್ಯಾರ್ಥಿ ಮನವರಿಕೆ ಉಪಕ್ರಮಕ್ಕೆ ಚಾಲನೆ ನೀಡಲಾಗಿದೆ.





## ಪ್ಲೇಟ್ ಬ್ಯಾಂಕ್

ಸಭೆ, ಸಮಾರಂಭ, ಕಾರ್ಯಕ್ರಮಗಳ ವೇಳೆ ಪ್ಲಾಸ್ಟಿಕ್ ಮತ್ತು ಒಮ್ಮೆ ಬಳಸಿ ಬಿಸಾಕುವಂತಹ ಪ್ಲೇಟ್‌ಗಳ ಬಳಕೆಗೆ ಕಡಿವಾಣ ಹಾಕುವ ಸಲುವಾಗಿ ಕ್ಷೇತ್ರವು ಊಟೋಪಚಾರ ಸಲಕರಣೆಗಳ ಕೇಂದ್ರವನ್ನು ಹೊಂದಿದೆ. ಮೇಲೆ ತಿಳಿಸಿದ ಸಂದರ್ಭಗಳಲ್ಲಿ ಈ ಸಲಕರಣೆಗಳನ್ನು ಬಾಡಿಗೆಗೆ ಪಡೆಯಬಹುದಾಗಿದೆ.












ಒಣ ತ್ಯಾಜ್ಯ ಸಂಗ್ರಹ ಕೇಂದ್ರ, ವಾರ್ಡ್ 64, ಈಜುಕೊಳ ಬಡಾವಣೆ

## ಯಶಸ್ಸು

- ಮೈಕ್ರೋ ಪ್ಲ್ಯಾನಿಂಗ್
- ಸ್ಮಾರ್ಟ್ ಸಂಗ್ರಹ ಮತ್ತು ಸಾಗಣೆ
- ಸ್ಮಾಟ್ ಲಾರಿ ಪಾಯಿಂಟ್‌ಗಳು
- ಸ್ಥಳೀಯ ಸಂಸ್ಕರಣಾ ಸೌಲಭ್ಯಗಳ ಬಳಕೆ (ಡಿಡಬ್ಲ್ಯುಸಿಸಿ, ಒಡಬ್ಲ್ಯುಸಿ, ಜೈವಿಕ ಅನಿಲ ಘಟಕ)
- ಕಪ್ಪು ತಾಣಗಳ ನಿರ್ಮೂಲನಾ ಅಭಿಯಾನ
- ಮರಗಳ ದತ್ತು ಸ್ವೀಕಾರ
- ಸಿಸಿಟಿವಿ ಕ್ಯಾಮೆರಾ ಮತ್ತು ವಿಚಕ್ಷಣೆ
- ಸಾರ್ವಜನಿಕ ಶೌಚಾಲಯ
- ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಸಲು ಉಪಕ್ರಮ
- ವಿದ್ಯಾರ್ಥಿ ಸ್ವಯಂಸೇವಕರು

## ಸವಾಲುಗಳು

- ಉತ್ಪತ್ತಿಯಾಗುವಲ್ಲೇ ವಿಲೇವಾರಿ ಅಭಿಯಾನ
- ಶುಚಿ ಮಿತ್ರ
- ಎಲೆಯಿಂದ ಕಾಂಪೋಸ್ಟ್
- ನೀವೇ ಕೈಚೀಲ ತನ್ನಿ
- ಪ್ಲೇಟ್ ಬ್ಯಾಂಕ್
- ಪ್ಲ್ಯಾಸ್ಟಿಕ್ ನಿಷೇಧ ಅಭಿಯಾನ


## ನಿರೀಕ್ಷಿತ ಫಲಿತಾಂಶ ಸಾಧಿಸಲಾಗದ್ದು

- ತ್ಯಾಜ್ಯ ಸಂಗ್ರಹ ಕಿಯೋಸ್ಕ್
- ಹಬ್ಬದ ವೇಳೆ ತ್ಯಾಜ್ಯ ನಿರ್ವಹಣೆ
- ಸ್ಮಾರ್ಟ್ ಸ್ವಚ್ಛ ಮಾತು
- ಇ – ತ್ಯಾಜ್ಯ ಸುರಿದಾಣಗಳು
- ಬೀದಿ ವ್ಯಾಪಾರಿಗಳ ಅಭಿಯಾನ

**6**

ಒಣ ತ್ಯಾಜ್ಯ ಸಂಗ್ರಹ ಕೇಂದ್ರಗಳು

ಕಸ ಸಂಗ್ರಹ ಪ್ರಮಾಣವು ಗಮನಾರ್ಹವಾಗಿ ಸುಧಾರಣೆ ಕಂಡಿದೆ.




*ಟನ್‌ಗಳು ಪ್ರತಿದಿನಕ್ಕೆ



# ಪರಿಸರ ಸಂಬಂಧಿ ಉಪಕ್ರಮಗಳು

“ಭವಿಷ್ಯದ ಎಲ್ಲಾ ಹೂವುಗಳು ಇಂದಿನ ಬೀಜಗಳಲ್ಲಿ ಅಡಕಗೊಂಡಿರುತ್ತವೆ.”

–ಸ್ವೀಡಿಷ್ ನಾಣ್ಣುಡಿ

## ಬೀಜದ ಮೆದ್ದುಂಡೆ ಅಭಿಯಾನ

ನಮ್ಮ ಕಾಡುಗಳು ಮತ್ತು ಹಸಿರು ತಾಣಗಳನ್ನು ಸಂರಕ್ಷಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವ ಪರಿಸರ ದಿನಾಚರಣೆ ಸಂದರ್ಭದಲ್ಲಿ 25,000 ಬೀಜದ ಮೆದ್ದುಂಡೆಗಳನ್ನು ನೆಡಲಾಯಿತು.



ಸ್ಯಾಂಕಿ ಕೆರೆಯ ಆವರಣದಲ್ಲಿ ಬೀಜದ ಮಣ್ಣು ಮೆದ್ದುಂಡೆ ಸಿದ್ಧಪಡಿಸುವಿಕೆ



ಜಾರಕಬಂಡೆ ಕಾವಲ್‌ನಲ್ಲಿ ಬೀಜದ ಮಣ್ಣುಂಡೆ ನೆಡುವಿಕೆ

## ಹಸಿರು ಸಂತೆ

- ಮಲ್ಲೇಶ್ವರಂ ನಿವಾಸಿಗಳು "ಪರಿಸರ ಪ್ರಜ್ಞೆ" ಸಂವೇದನೆ ಮೂಡಿಸುವ ಸಲುವಾಗಿ ಪ್ರತಿವರ್ಷವೂ ಹಸಿರು ಸಂತೆ ಆಯೋಜಿಸುತ್ತಾರೆ.
- ಮಳೆ ನೀರು ಕೊಯ್ಲಿನಿಂದ ಅಂತರ್ಜಲ ಸಂರಕ್ಷಣೆ, ಜಾಗತಿಕ ತಾಪಮಾನ ಏರುವಿಕೆ ನಿಯಂತ್ರಿಸುವ ದಿಸೆಯಲ್ಲಿ ಹಸಿರು ತಾಣಗಳ ಸಂರಕ್ಷಣೆ ಮತ್ತು ನಮ್ಮ ಸಂಪನ್ಮೂಲಗಳ ಸಂರಕ್ಷಣೆ ಮೂಲಕ ಸುಸ್ಥಿರ ಅಭಿವೃದ್ಧಿ ಹವ್ಯಾಸಗಳನ್ನು ಮೈಗೂಡಿಸಿಕೊಳ್ಳಲು ಉತ್ತೇಜಿಸಲಾಗುವುದು.







**8000** ಮಲ್ಲೇಶ್ವರದಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ನೆಡಲಾದ ಸಸಿಗಳ ಸಂಖ್ಯೆ

**3000** ಮಲ್ಲೇಶ್ವರದಲ್ಲಿ ಕಳೆದ ಐದು ವರ್ಷಗಳ ಅವಧಿಯಲ್ಲಿ ವಿತರಿಸಲಾದ ಸಸಿಗಳ ಸಂಖ್ಯೆ



# ಮಹಿಳಾ ಸಬಲೀಕರಣ

"ಅಭಿವೃದ್ಧಿ ಸಾಧಿಸಲು ಮಹಿಳಾ ಸಬಲೀಕರಣಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಮತ್ತೊಂದು ಸಾಧನ ಇಲ್ಲ."

–ಕೋಫಿ ಅನ್ನಾನ್

# ಮಹಿಳಾ ಸಬಲೀಕರಣ

ಮಹಿಳಾ ಸಬಲೀಕರಣವನ್ನು ಧ್ಯೇಯವಾಗಿಸಿಕೊಂಡು ಅಗತ್ಯ ಕೌಶಲ್ಯಗಳ ತರಬೇತಿ ಮತ್ತು ದೂರ ಶಿಕ್ಷಣ ಕೋರ್ಸ್‌ಗಳನ್ನು ನೀಡುವ ಪ್ರಾದೇಶಿಕ ಕೇಂದ್ರ ಸ್ಥಾಪಿಸಲಾಗಿದೆ. ಇಲ್ಲಿ ಮಹಿಳೆಯರಿಗೆ ಶೈಕ್ಷಣಿಕ ಕಾರ್ಯಕ್ರಮಗಳ ಜೊತೆಗೆ ಆರೋಗ್ಯ, ನೈರ್ಮಲ್ಯ ಮತ್ತು ಬ್ಯಾಂಕಿಂಗ್ ಸೇವೆಗಳ ಕುರಿತು ಮಾಹಿತಿ ನೀಡಲಾಗುತ್ತದೆ. ಅಂಗನವಾಡಿ, ಶಾಲೆಗಳು ಮತ್ತು ಕಾಲೇಜುಗಳಲ್ಲಿ ಉಚಿತವಾಗಿ ಸ್ಯಾನಿಟರಿ ಪ್ಯಾಡ್‌ಗಳನ್ನು ವಿತರಿಸಲಾಗಿದೆ.












# ಯುವ ಸಬಲೀಕರಣ

“ನಮ್ಮ ರಾಷ್ಟ್ರಕ್ಕೆ ಜನನಾಯಕರ ಅಗತ್ಯವಿದೆ; ಜನನಾಯಕರಾಗಿ; ಕೆಲಸ ಮಾಡುವುದಷ್ಟೇ ನಿಮ್ಮ ಕರ್ತವ್ಯ; ನಂತರ, ಎಲ್ಲವೂ ತಂತಾನೇ ಅನುಸರಿಸಿಕೊಂಡು ಬರುತ್ತದೆ.”

– ಸ್ವಾಮಿ ವಿವೇಕಾನಂದ

Youth EDGE 2016 | REFLECT TRANSFORM CREATE


# ಯುವ ಸಬಲೀಕರಣ

ಉದ್ಯಮದ ಅಗತ್ಯಗಳನ್ನು ಪೂರೈಸುವ ನಿಟ್ಟಿನಲ್ಲಿ ಕೌಶಲ್ಯ ಅಭಿವೃದ್ಧಿ ಸಾಧ್ಯತೆಗಳಿಗೆ ಚೈತನ್ಯ ತುಂಬಬೇಕು ಎಂಬುದು ಡಾ। ಅಶ್ವಥ್‌ನಾರಾಯಣ್ ಅವರ ನಂಬಿಕೆಯಾಗಿದೆ. ಬೆಂಗಳೂರಿನ ಯುವಕರಿಗೆ ಕೌಶಲ್ಯ ತರಬೇತಿ ವ್ಯವಸ್ಥೆ ಮಾಡುವ ಮೂಲಕ ಈ ನಗರವನ್ನು ಅತ್ಯಂತ ಲಾಭ ತಂದುಕೊಡುವ ಮಾನವ ಸಂಪನ್ಮೂಲ ರಾಜಧಾನಿಯನ್ನಾಗಿಸಲು ಸಾಧ್ಯವಿದೆ. ಯುವ ಸಬಲೀಕರಣಕ್ಕಾಗಿ ಅವರು ಕೈಗೊಂಡ ಕಾರ್ಯಗಳು ಈ ಕೆಳಗಿನಂತಿವೆ:

- ಟೀಮ್‌ಲೀಸ್ ಮತ್ತು ಐಐಜೆಟಿ ಸಹಯೋಗದೊಂದಿಗೆ ಬೃಹತ ಉದ್ಯೋಗ ಮೇಳಗಳ ಸಂಘಟನೆ. ಸುಮಾರು 5000 ಸಂಭಾವ್ಯ ಅಭ್ಯರ್ಥಿಗಳ ಪರಿಶೀಲನೆ ಮತ್ತು ಸಮಾಲೋಚಕರಿಂದ ಅವಲೋಕನ.
- ಉದ್ಯಮಗಳ ನಿರೀಕ್ಷೆಗೆ ತಕ್ಕಂತೆ ತಾವು ಹೊಂದಿರಬೇಕಾದ ಔದ್ಯೋಗಿಕ ಕೌಶಲ್ಯಗಳು & ತರಬೇತಿ ಯಾವುದೆಂಬುದನ್ನು ಗುರುತಿಸಿಕೊಳ್ಳಲು ಸಮಾಲೋಚಕರು ನೆರವಾದರು. ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮುಂಚೂಣಿ ಕಂಪೆನಿಗಳಾದ ವಿಪ್ರೊ, ಫ್ಯೂಚರ್ ಗ್ರೂಪ್, ಶಾಪರ್ಸ್ ಸ್ಟಾಪ್, ಯುನಿಸಿಸ್, ಕಾರ್ವಿ ಕನ್ಸಲ್ಟೆಂಟ್ಸ್, ಐಸಿಐಸಿಐ ಫಸ್ಟ್ ಸೋರ್ಸ್, ಸ್ಪರ್ಶ್ ಮತ್ತು ಸಿನೊವಾದಂತಹ ಕಂಪೆನಿಗಳು ಈ ಮೇಳದಲ್ಲಿ ಪಾಲ್ಗೊಳ್ಳುತ್ತಿವೆ.
- ವೃತ್ತಿ ಕೌಶಲ್ಯದ ಕಂದಕಗಳನ್ನು ನಿವಾರಿಸುವ ಸಲುವಾಗಿ ಮಲ್ಲೇಶ್ವರ ಕ್ಷೇತ್ರದ ವಿವಿಧೆಡೆ ಹೊಲಿಗೆ, ಪ್ರಾಥಮಿಕ ಕಂಪ್ಯೂಟರ್ ಕೌಶಲ್ಯ, ಮರ ಕೆತ್ತನೆ (ಬಡಗಿ) ಇತ್ಯಾದಿಗೆ ಸಂಬಂಧಿಸಿ ಹಲವಾರು ಕೌಶಲ ಅಭಿವೃದ್ಧಿ ತರಬೇತಿ ಕಾರ್ಯಕ್ರಮಗಳನ್ನು ನಡೆಸಲಾಗಿದೆ.
- “ನಾಳೆಯ ಪುನರ್ ನಿರ್ಮಾಣ” ವಿಷಯ ಕುರಿತು 2016ರಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಉದ್ದಿಮೆಗಳ ಪರಿಣತರು ಮಹತ್ವದ ಜಾಗತಿಕ ವಿಷಯಗಳ ಕುರಿತು ವಿವರಿಸಿದರು.
- “ಭಾರತದಲ್ಲಿ ಉದ್ಯೋಗ ಸೃಷ್ಟಿಯ ಭವಿಷ್ಯ” ಕುರಿತು 2017ರಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವೃತ್ತಿ ಪರಿಣತರಾದ ನ್ಯಾಸ್‌ಕಾಮ್‌ನ ಶ್ರೀ ರವಿ ಗುರುರಾಜ್ ಮತ್ತು ಟಾಕ್ ಟೆಂಪಲ್‌ನ ಶ್ರೀ ಇಯಾನ್ ಫರಿಯಾ ಅವರು ಭವಿಷ್ಯದ ಔದ್ಯೋಗಿಕ ಸವಾಲುಗಳ ಕುರಿತು ಸ್ಥೂಲ ವಿವರಣೆ ನೀಡಿದರು.





# ನಮ್ಮ ಪ್ರಧಾನಿ ಅವರ ಆಶಯಕ್ಕೆ ಸ್ಪಂದನ

“ಯೋಗವು ವ್ಯಕ್ತಿಯಲ್ಲಿ ತನ್ನೊಂದಿಗೆ, ಜಗತ್ತಿನೊಂದಿಗೆ ಹಾಗೂ ನಿಸರ್ಗದೊಂದಿಗೆ ಏಕತ್ವ ಭಾವ ಮೂಡಿಸುತ್ತದೆ.”

–ಶ್ರೀ ನರೇಂದ್ರ ಮೋದಿ

# ಯೋಗ ದಿನಾಚರಣೆ

ನಮ್ಮ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು ಭಾರತ ಸಂಸ್ಕೃತಿ ಮತ್ತು ಜ್ಞಾನವನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸಲು ಹಲವು ದಿಟ್ಟ ಕ್ರಮಗಳನ್ನು ಕೈಗೊಂಡಿದ್ದಾರೆ. ಇದರ ಅಂಗವಾಗಿ, ಯೋಗಾಭ್ಯಾಸದ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಉಪಯೋಗಗಳ ಕುರಿತು ಅರಿವು ಮೂಡಿಸುವ ದಿಸೆಯಲ್ಲಿ "ಅಂತರರಾಷ್ಟ್ರೀಯ ಯೋಗ ದಿನಾಚರಣೆ"ಯ ಚಿಂತನೆಗೆ ಅವರು ಚಾಲನೆ ನೀಡಿದರು. 2014ರಲ್ಲಿ ನಡೆದ ವಿಶ್ವಸಂಸ್ಥೆಯ ಮಹಾಧಿವೇಶನದಲ್ಲಿ, ಪ್ರತಿವರ್ಷ ಜೂನ್ 21ನೇ ದಿನಾಂಕವನ್ನು "ಅಂತರರಾಷ್ಟ್ರೀಯ ಯೋಗ ದಿನ" ಎಂದು ಆಚರಿಸಲು ಅವಿರೋಧ ನಿರ್ಣಯ ತೆಗೆದುಕೊಳ್ಳಲಾಯಿತು. ಅಂದಿನಿಂದ, ಯೋಗಾಭ್ಯಾಸವು ಆರೋಗ್ಯ ಸ್ವಾಸ್ಥ್ಯದ ಮೇಲೆ ಬೀರುವ ಸಕಾರಾತ್ಮಕ ಪರಿಣಾಮಗಳನ್ನು ಹೆಚ್ಚೆಚ್ಚು ಜನರಿಗೆ ಲಭ್ಯವಾಗಿಸುವ ಧ್ಯೇಯದಿಂದ ಮಲ್ಲೇಶ್ವರ ಕ್ಷೇತ್ರದ 18 ಕಡೆಗಳಲ್ಲಿ ಯೋಗ ದಿನಾಚರಣೆಯನ್ನು ಸಡಗರ, ಸಂಭ್ರಮದಿಂದ ಆಚರಿಸಲಾಗುತ್ತಿದೆ.




ಮಲ್ಲೇಶ್ವರದಲ್ಲಿ ಯೋಗ ದಿನಾಚರಣೆ

# ಮೋದಿ ಮೇಳ

ಶ್ರೀ ನರೇಂದ್ರ ಮೋದಿ ಅವರ ಮೂರು ವರ್ಷಗಳ ಆಡಳಿತದ ಸಾಧನೆಗಳನ್ನು ಆಚರಿಸಲು ಸರಣಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈ ಮೇಳದ ಸಂದರ್ಭದಲ್ಲಿ ತಜ್ಞರು ಮತ್ತು ಅಧಿಕಾರಿಗಳು ಪ್ರಧಾನಮಂತ್ರಿ ಜನ್ ಧನ್ ಯೋಜನೆ, ಮುದ್ರಾ ಸಾಲ ನೆರವು, ಪ್ರಧಾನ ಮಂತ್ರಿ ಆವಾಸ್ ಯೋಜನೆ, ಅಟಲ್ ಪಿಂಚಣಿ ಯೋಜನೆ, ಸ್ಟಾರ್ಟ್‌ಅಪ್ ಇಂಡಿಯಾ ಇತ್ಯಾದಿ ಸ್ಕೀಮ್‌ಗಳ ಬಗ್ಗೆ ಮನವರಿಕೆ ಮಾಡಿಕೊಟ್ಟರು.









ಮಲ್ಲೇಶ್ವರದ ಮಾಡೆಲ್ ಶಾಲೆಯಲ್ಲಿ ಮೋದಿ ಮೇಳ



# ಉತ್ತಮ ಆಡಳಿತ

ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದಂದು ಪ್ರತಿವರ್ಷವೂ ಮಲ್ಲೇಶ್ವರನಲ್ಲಿ ಅನುಸರಿಸಲಾಗುತ್ತಿರುವ “ಉತ್ತಮ ಆಡಳಿತ”ದ ಅಭ್ಯಾಸಗಳ ಬಗ್ಗೆ ಪರಿಚಯಿಸುವ ಕಾರ್ಯ ಮಾಡಲಾಗುತ್ತಿದೆ.
















- ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರ ಮಾರ್ಗದರ್ಶನದಲ್ಲಿ ಜಿಎಸ್‌ಟಿ, ಪ್ರಧಾನ ಮಂತ್ರಿ ಜನ್ ಧನ್ ಯೋಜನೆ, ನರೇಂದ್ರ ಮೋದಿ ಆಪ್, ನೋಟು ಅಮಾನ್ಯೀಕರಣ, ಭಿಮ್ ಆಪ್ ಇತ್ಯಾದಿಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.
- ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯಲ್ಲಿ ನಮೋ ಆಪ್‌ನ್ನು ಸಕ್ರಿಯವಾಗಿ ಬಳಸುವವರ ಸಂಖೆ 25,000ಕ್ಕೂ ಹೆಚ್ಚು ಇದೆ.





ಪ್ರಧಾನ ಮಂತ್ರಿ ಜನ್ ಧನ್ ಯೋಜನೆ (ಪಿಎಂಜೆಡಿವೈ)



ನರೇಂದ್ರ ಮೋದಿ ಆಪ್ ಡೌನ್‌ಲೋಡ್ ಮಾಡಿಕೊಳ್ಳುತ್ತಿರುವುದು.



# ಆಟದ ಮೈದಾನಗಳು

"ಕ್ರೀಡೆ ಮಾತ್ರವೇ ಮಾನವ ಸಂತತಿಯ ಉತ್ಕೃಷ್ಟ ಜ್ಞಾನವು ಅನಾವರಣಗೊಳ್ಳುವ ಮಾರ್ಗವಾಗಿದೆ."

–ಜೋಸೆಫ್ ಚಿಲ್ಟನ್ ಪಿಯರ್ಸ್

ನಾಡಪ್ರಭು ಕೆಂಪೇಗೌಡ ಆಟದ ಮೈದಾನ, ವಾರ್ಡ್ 66

# ಆಟದ ಮೈದಾನಗಳು

ಮಲ್ಲೇಶ್ವರದ ಎಲ್ಲಾ ಆಟದ ಮೈದಾನಗಳನ್ನು ನವೀಕರಿಸಿ, ಉನ್ನತ ದರ್ಜೆಗೇರಿಸುವುದಕ್ಕೆ ಪೂರಕವಾಗಿ ಟೆನ್ಸೈಲ್ ರೂಫಿಂಗ್, ಫೆನ್ಸಿಂಗ್, ಸ್ಕೇಟಿಂಗ್ ಸವಲತ್ತುಗಳು, ಫುಟ್‌ಬಾಲ್ ಪಿಚ್‌ಗಳು ಮತ್ತಿತರ ಸೌಲಭ್ಯಗಳ ವ್ಯವಸ್ಥೆ ಮಾಡಲಾಗಿದೆ. ಈ ಉದ್ಯಾನಗಳು ಮತ್ತು ಮೈದಾನಗಳಲ್ಲಿ ಬಳಕೆದಾರರ ಸುರಕ್ಷತೆಯ ದೃಷ್ಟಿಯಿಂದ ಭದ್ರತಾ ಮತ್ತು ವಿಚಕ್ಷಣಾ ವ್ಯವಸ್ಥೆಯನ್ನು ಅಳವಡಿಸಲಾಗಿದೆ.

| ವಾರ್ಡ್ | ಹೆಸರು | ಸ್ಥಳ |
|---|---|---|
| 35 | ಎಸ್. ಬಂಗಾರಪ್ಪ ಆಟದ ಮೈದಾನ | ಸದಾಶಿವನಗರ, ಪೂರ್ಣಪ್ರಜ್ಞ ಶಾಲೆ |
| 35 | ಸರ್ಕಾರಿ ಪಿಯು ಕಾಲೇಜು ಆಟದ ಮೈದಾನ | 18ನೇ ಕ್ರಾಸ್, ಮಲ್ಲೇಶ್ವರ |
| 45 | ಸರ್ಕಾರಿ ಶಾಲೆ ಆಟದ ಮೈದಾನ | ಸುಬೇದಾರ್ ಪಾಳ್ಯ |
| 45 | ಸರ್ಕಾರಿ ಮಾಡೆಲ್ ಶಾಲೆ ಆಟದ ಮೈದಾನ | ಸಂತೆ ಮೈದಾನ, ಯಶವಂತಪುರ |
| 65 | ಮಲ್ಲೇಶ್ವರ ಆಟದ ಮೈದಾನ | ಮಲ್ಲೇಶ್ವರ ಸರ್ಕಲ್ |
| 65 | ಚಂದ್ರಶೇಖರ್ ಆಜಾದ್ ಆಟದ ಮೈದಾನ | 6ನೇ ಕ್ರಾಸ್, ಮಲ್ಲೇಶ್ವರ ಆಟದ ಮೈದಾನ |
| 64 | ಕರ್ನಲ್ ವಸಂತ್ ಆಟದ ಮೈದಾನ | ಲೋವರ್ ಆರ್ಚಿಡ್ಸ್ |
| 64 | ಕಬ್ಬಡಿ ಮೈದಾನ | ವಯ್ಯಾಲಿಕಾವಲ್, ಬಿಜೆಪಿ ಕಚೇರಿ ಎದುರು |
| 66 | ನಾಡಪ್ರಭು ಕೆಂಪೇಗೌಡ ಆಟದ ಮೈದಾನ | ಮಿಲ್ಕ್ ಕಾಲೋನಿ |
| 66 | ಗರಡಿ ಮನೆ ಆಟದ ಮೈದಾನ | ಸುಬ್ರಮಣ್ಯ ನಗರ |



ಮಲ್ಲೇಶ್ವರ ಮೈದಾನ



ಮಲ್ಲೇಶ್ವರ ಮೈದಾನ



18ನೇ ಕ್ರಾಸ್ ಮೈದಾನ, ಮಲ್ಲೇಶ್ವರ


ಉದ್ಯಾನಗಳು
“ಉದ್ಯಾನಗಳು ಮತ್ತು ಆಟದ ಮೈದಾನಗಳು ನಗರದ ಆತ್ಮವಿದ್ದಂತೆ.”
–ಮಾರ್ಟಿನ್ ರುಬಿನ್

# ಉದ್ಯಾನಗಳು

ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯಲ್ಲಿ ಹೆಚ್ಚು ಉದ್ಯಾನಗಳು ಮತ್ತು ಮೈದಾನಗಳು ಇದ್ದರೂ, ಇವು ನಿರ್ಲಕ್ಷ್ಯ ಮತ್ತು ಸೂಕ್ತ ನಿರ್ವಹಣೆಯಿಲ್ಲದೆ ಸೊರಗಿ ಹೋದ ಸ್ಥಿತಿಯಲ್ಲಿದ್ದವು. ಡಾ। ಅಶ್ವಥ್‌ನಾರಾಯಣ್ ಅವರ ದಣಿವರಿಯದ ಪ್ರಯತ್ನದಿಂದಾಗಿ ಈಗ ಮಲ್ಲೇಶ್ವರ ತನ್ನ ಪಾರ್ಕ್ ಮತ್ತು ಕ್ರೀಡಾಂಗಣಗಳ ಯೋಜಿತ ವಿನ್ಯಾಸದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳಬಹುದಾಗಿದೆ. ಬಹುತೇಕ ಉದ್ಯಾನ ಮತ್ತು ಮೈದಾನಗಳ ನಿರ್ವಹಣೆಯು ಸರ್ಕಾರಿ – ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ನಡೆಯುತ್ತಿದೆ.

| ವಾರ್ಡ್ | ಹೆಸರು | ಸ್ಥಳ |
|---|---|---|
| 35 | ಸ್ಯಾಂಕಿ ಕೆರೆ ಉದ್ಯಾನ | ಸ್ಯಾಂಕೆ ಕೆರೆ |
| 35 | ಕೆಳ ಹಂತದಲ್ಲಿರುವ ಉದ್ಯಾನ | ಸದಾಶಿವನಗರ |
| 35 | ಪಿ.ಬಿ.ಶ್ರೀನಿವಾಸ್ ಉದ್ಯಾನ | ಸದಾಶಿವನಗರ |
| 35 | ಆರ್‌ಎಂವಿ ಉದ್ಯಾನ | ಆರ್‌ಎಂವಿ 2ನೇ ಹಂತ |
| 35 | ಟ್ರ್ಯಾಂಗಲ್ ಉದ್ಯಾನ | ಆರ್‌ಎಂವಿ 2ನೇ ಹಂತ |
| 35 | 16ನೇ ಕ್ರಾಸ್ ಉದ್ಯಾನ | ಮಲ್ಲೇಶ್ವರ |
| 35 | ಗೋಕಾಕ್ ಚಳವಳಿ ಸ್ಮಾರಕ ಉದ್ಯಾನ | ಸಂಪಿಗೆ ರಸ್ತೆ, ಮಲ್ಲೇಶ್ವರ |
| 35 | ಟ್ರ್ಯಾಂಗಲ್ ಉದ್ಯಾನ, ಸದಾಶಿವನಗರ | ಸದಾಶಿವನಗರ |
| 35 | ಎಜಿಎಸ್ ಲೇಔಟ್ ಪಾರ್ಕ್ | ಎಜಿಎಸ್ ಲೇಔಟ್ |
| 35 | ಜಗಜ್ಯೋತಿ ಬಸವೇಶ್ವರ ಪಾರ್ಕ್ | ಜಲದರ್ಶಿನಿ ಲೇಔಟ್, ಹೊಸ ಬಿಇಎಲ್ ರಸ್ತೆ |
| 35 | ಡಾ. ಶಿವಪ್ರಸಾದ್ ಉದ್ಯಾನ | ಅಶ್ವತ್ಥನಗರ |
| 35 | ನಾಡಪ್ರಭು ಕೆಂಪೇಗೌಡ ಉದ್ಯಾನ | ಸದಾಶಿವನಗರ, ಬಳ್ಳಾರಿ ರಸ್ತೆ |
| 36 | ಅಟಲ್‌ಜಿ ಉದ್ಯಾನ | ದಿವಾನರಪಾಳ್ಯ |
| 45 | ವೆಂಕಟೇಶ್ವರ ದೇವಸ್ಥಾನ ಮಕ್ಕಳ ಉದ್ಯಾನ | 14ನೇ ಲೇನ್, 16ನೇ ಕ್ರಾಸ್, ಮಲ್ಲೇಶ್ವರ |
| 46 | ಬಿಬಿಎಂಪಿ ಉದ್ಯಾನ | 10ನೇ ಮುಖ್ಯರಸ್ತೆ, ಮಲ್ಲೇಶ್ವರ |
| 45 | ಫುಟ್‌ಪಾತ್ ಉದ್ಯಾನ | 8ನೇ ಮುಖ್ಯರಸ್ತೆ, ಮಲ್ಲೇಶ್ವರ |
| 45 | ಮಕ್ಕಳ ಉದ್ಯಾನ | 15ನೇ ಕ್ರಾಸ್, 13ನೇ ಮುಖ್ಯರಸ್ತೆ |
| 64 | ಲೋವರ್ ಪ್ಯಾಲೆಸ್ ಆರ್ಚರ್ಡ್ ಉದ್ಯಾನ | ಲೋವರ್ ಪ್ಯಾಲೆಸ್ ಆರ್ಚರ್ಡ್, ವಯ್ಯಾಲಿಕಾವ್ |
| 64 | ಶ್ರೀ ಗುರು ಮಧ್ವಾಚಾರ್ಯ ಪಾರ್ಕ್ | ರಾಘವೇಂದ್ರ ದೇವಸ್ಥಾನದ ಹಿಂಭಾಗ, ಈಜುಕೊಳ ಬಡಾವಣೆ |
| 64 | ರಾಮ್‌ದೇವ್ ಉದ್ಯಾನ | 10ನೇ ಕ್ರಾಸ್, ಈಜುಕೊಳ ಬಡಾವಣೆ, ವಾರ್ಡ್ ಕಚೇರಿ ಬಳಿ |
| 64 | ರಮಣ ಉದ್ಯಾನ | 12ನೇ ಕ್ರಾಸ್, 4ನೇ ಮುಖ್ಯರಸ್ತೆ, ವಯ್ಯಾಲಿಕಾವಲ್ |
| 65 | ಗಾಯತ್ರಿದೇವಿ ಉದ್ಯಾನ | 16ನೇ ಕ್ರಾಸ್, ಆರ್‌ಒ ಕಚೇರಿ ಪಕ್ಕ |
| 65 | ಜಗದ್ಗುರು ಶ್ರೀ ಶ್ರೀ ಶ್ರೀ ಶಂಕರಾಚಾರ್ಯ ಉದ್ಯಾನ | 11ನೇ ಮುಖ್ಯರಸ್ತೆ, 11ನೇ ಕ್ರಾಸ್ |
| 66 | ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉದ್ಯಾನ | ಸುಬ್ರಮಣ್ಯ ನಗರ |
| 66 | ಟ್ರಿಪ್ಲಿಕೇನ್ ರಸ್ತೆ ಉದ್ಯಾನ | ವಿವೇಕಾನಂದ ಕಾಲೇಜು ಬಳಿ |
| 76 | ಕನ್ನಡ ಚಳವಳಿ ಹೋರಾಟಗಾರರ ಸ್ಮರಣಾರ್ಥ ಉದ್ಯಾನ | ಅಯ್ಯಪ್ಪ ದೇವಸ್ಥಾನ |



16ನೇ ಕ್ರಾಸ್, 10ನೇ ಮುಖ್ಯರಸ್ತೆ, ಮಲ್ಲೇಶ್ವರ



ಆರ್‌ಎಂವಿ 2ನೇ ಹಂತ



ಕೆಳ ಹಂತದ ಉದ್ಯಾನ



ಗಾಯತ್ರಿ ದೇವಿ ಉದ್ಯಾನ


ಸ್ಯಾಂಕಿ ಕೆರೆ
“ಕೆರೆಯ ಸನಿಹದಲ್ಲಿ ಕಳೆದ ಸಮಯವು ಒಳ್ಳೆಯ ರೀತಿಯಲ್ಲಿ ಕಳೆದಂತೆ.”
–ಅನಾನಿಮಸ್



ಸ್ಯಾಂಕಿ ಕೆರೆ



# ಸ್ಯಾಂಕಿ ಕೆರೆ

**ಕೆರೆ ದಂಡೆಯಲ್ಲಿ ಬದುಕು ಪ್ರಫುಲ್ಲತೆಯಿಂದ ಕೂಡಿರುತ್ತದೆ.**
**ಸ್ಯಾಂಕಿ ಕೆರೆಯ ದಿವ್ಯ ಸೌಂದರ್ಯ...**


• ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರ ಕ್ರಿಯಾಶೀಲ ಪ್ರಯತ್ನದಿಂದಾಗಿ ಸ್ಯಾಂಕಿ ಕೆರೆಯ ಪರಿಸರದಲ್ಲಿ ಮಹತ್ವದ ಪರಿವರ್ತನೆಯಾಗಿದೆ. ಇದು ಪ್ರಸ್ತುತ ಬೆಂಗಳೂರಿನ ಅತ್ಯುತ್ತಮ ಸಂರಕ್ಷಿತ ಕೆರೆಗಳಲ್ಲಿ ಒಂದಾಗಿದೆ.

• ಕೆರೆಯ ಪುನಶ್ಚೇತನಕ್ಕಾಗಿ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಲಾಗಿದೆ. ಭೇಟಿ ನೀಡುವವರ ಅನುಕೂಲಕ್ಕಾಗಿ ನೆರಳು ಛತ್ರಿ (ಕ್ಯಾನೊಪಿ), ಬೆಂಚು, ಶೌಚಾಲಯಗಳ ವ್ಯವಸ್ಥೆ ಇದೆ.

• ಸಮುದಾಯ ಪಾಲ್ಗೊಳ್ಳುವಿಕೆಯಿಂದ ಪರಿಸರ ಸಂರಕ್ಷಣೆ ಕುರಿತು ಅರಿವು ಮೂಡಿಸುವ ಸಲುವಾಗಿ 2017ರ ಆಗಸ್ಟ್‌ನಲ್ಲಿ 'ನಮ್ಮ ಬೆಂಗಳೂರು' ಹಬ್ಬವನ್ನು ಸಡಗರದಿಂದ ಆದರಿಸಲಾಯಿತು.







# ಸಂಸ್ಕೃತಿ–ಪರಂಪರೆ ರಕ್ಷಣೆ

“ತಮ್ಮ ಇತಿಹಾಸ, ಮೂಲ ಮತ್ತು ಸಂಸ್ಕೃತಿಯ ಅರಿವಿಲ್ಲದ
ಜನರು ಬೇರುಗಳಿಲ್ಲದ ಮರಗಳಿದ್ದಂತೆ.”

–ಮಾರ್ಕಸ್ ಗ್ಯಾರ್ವಿ

# ಸಂಸ್ಕೃತಿ ರಕ್ಷಣೆ

ಮಲ್ಲೇಶ್ವರ ಕ್ಷೇತ್ರವು ಶ್ರೀಮಂತ ಪರಂಪರೆ, ಸಂಪ್ರದಾಯ ಮತ್ತು ಸಂಸ್ಕೃತಿಗೆ ಹೆಸರಾದ ಪ್ರದೇಶವಾಗಿದ್ದು ಅನೇಕ ಪಾರಂಪರಿಕ ಕಟ್ಟಡಗಳು ಹಾಗೂ ದೇವಸ್ಥಾನಗಳಿಂದ ಕೂಡಿದೆ.ಈ ಪ್ರದೇಶದ ಸಮೂಹ ಚೈತನ್ಯವನ್ನು ಉತ್ತೇಜಿಸುವ ಸಲುವಾಗಿ ಹಲವಾರು ಹಬ್ಬ ಹರಿದಿನಗಳಲ್ಲಿ ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಅವರು ಸಕ್ರಿಯವಾಗಿ ಪಾಲ್ಗೊಳ್ಳುತ್ತಾ ಬಂದಿದ್ದಾರೆ.

ಡಾ। ಅಶ್ವಥ್‌ನಾರಾಯಣ್ ಸಿ. ಎನ್. ಫೌಂಡೇಷನ್ ಪ್ರತಿವರ್ಷವೂ ಮಲ್ಲೇಶ್ವರ ಸರ್ಕಲ್ ಆಟದ ಮೈದಾನದ ಎದುರಿನ ಆವರಣದಲ್ಲಿ ವಿಜೃಂಭಣೆಯಿಂದ ಶಿವರಾತ್ರಿ ಹಬ್ಬವನ್ನು ಆಯೋಜಿಸುತ್ತಿದೆ.






# ಉದ್ಯಾನಗಳು ಮತ್ತು ಮೈದಾನಗಳಿಗೆ ಹೆಸರು

ನಮ್ಮ ಚರಿತ್ರೆಯಲ್ಲಿ, ಸಮಾಜ, ಸಂಸ್ಕೃತಿ ಮತ್ತು ಒಂದು ರಾಷ್ಟ್ರವಾಗಿ ನಮ್ಮ ಬೆಳವಣಿಗೆಗೆ ಪೂರಕವಾದ ರಚನಾತ್ಮಕ ಕೊಡುಗೆಗಳನ್ನು ನೀಡಿದವರು ಬಹಳಷ್ಟು ಮಂದಿ ಇದ್ದಾರೆ. ಅಂಥವರ ಕೊಡುಗೆಗಳನ್ನು ನಿರ್ಲಕ್ಷ್ಯಿಸದೆ ತಾವು ಮಾಡಿದ ಪ್ರಯತ್ನಕ್ಕಾಗಿ ಅವರಿಗೆ ಪುರಸ್ಕಾರ ಸಲ್ಲಬೇಕು.ಇದನ್ನು ಗಮನದಲ್ಲಿರಿಸಿಕೊಂಡು ಹಾಗೂ ಅವರು ಮಾಡಿದ ಕಾರ್ಯಗಳು ನಾಗರಿಕರಾದ ನಮ್ಮೆಲ್ಲರಿಗೂ ಪ್ರೇರಕ ಶಕ್ತಿಯಾಗಿ ಮುನ್ನಡೆಸಲಿ ಎಂಬ ಆಶಯದೊಂದಿಗೆ ನಮ್ಮ ರಸ್ತೆ ಮತ್ತು ಉದ್ಯಾನಗಳಿಗೆ ಜನನಾಯಕರ, ದಿಗ್ಗಜರ ಮತ್ತು ಉದಾತ್ತ ಚೇತನಗಳ ಹೆಸರುಗಳನ್ನು ಇಡಲಾಗಿದೆ.

| ವಾರ್ಡ್ | ಉದ್ಯಾನ/ ಮೈದಾನದ ಹೆಸರು | ಹಿಂದಿನ ಹೆಸರು |
|---|---|---|
| 35 | ಡಾ. ಪಿ. ಬಿ. ಶ್ರೀನಿವಾಸ್ ಉದ್ಯಾನ | ಸದಾಶಿವನಗರ ಉದ್ಯಾನ |
| 35 | ಜಗಜ್ಯೋತಿ ಶ್ರೀ ಬಸವೇಶ್ವರ ಉದ್ಯಾನ | ನ್ಯೂ ಬಿಇಎಲ್ ರಸ್ತೆ, ಜಲದರ್ಶಿನಿ ಲೇಔಟ್ |
| 36 | ಅಟಲ್‌ಜಿ ಉದ್ಯಾನ | ದಿವಾನರಪಾಳ್ಯ |
| 64 | ಕರ್ನಲ್ ವಸಂತ್ | ವಯ್ಯಾಲಿಕಾವಲ್ ಮೈದಾನ, ಲೋವರ್ ಪ್ಯಾಲೆಸ್ ಆರ್ಚಿಡ್ಸ್ |
| 64 | ಶ್ರೀ ಗುರು ಮಧ್ವಾಚಾರ್ಯ ಉದ್ಯಾನ | ದತ್ತಾತ್ರೇಯ ಉದ್ಯಾನ, ಈಜುಕೊಳದ ಬಡಾವಣೆ |
| 65 | ಚಂದ್ರಶೇಖರ್ ಆಜಾದ್ ಕ್ರೀಡಾಂಗಣ | ಹಳ್ಳದ ಮೈದಾನ, ಮಲ್ಲೇಶ್ವರ |
| 65 | ಜಗದ್ಗುರು ಶ್ರೀ ಶ್ರೀ ಶ್ರೀ ಶಂಕರಾಚಾರ್ಯ ಉದ್ಯಾನ | 11ನೇ ಕ್ರಾಸ್, ಮಲ್ಲೇಶ್ವರ |
| 66 | ನಾಡಪ್ರಭು ಕೆಂಪೇಗೌಡ ಆಟದ ಮೈದಾನ | ಮಿಲ್ಕ್ ಕಾಲೊನಿ ಕ್ರೀಡಾಂಗಣ, ಸುಬ್ರಮಣ್ಯ ನಗರ |
| 67 | ಸಂಗೊಳ್ಳಿ ರಾಯಣ್ಣ ಉದ್ಯಾನ | ಸುಬ್ರಮಣ್ಯ ನಗರ ಉದ್ಯಾನ |
| 76 | ಕನ್ನಡ ಚಳವಳಿ ಹೋರಾಟಗಾರರ ಸ್ಮರಣಾರ್ಥ ಉದ್ಯಾನ | ಅಯ್ಯಪ್ಪಸ್ವಾಮಿ ದೇವಸ್ಥಾನ ಉದ್ಯಾನ, ಶ್ರೀರಾಮಪುರ |








# ರಸ್ತೆಗಳಿಗೆ ನಾಮಕರಣ

| ವಾರ್ಡ್ | ರಸ್ತೆ/ ವೃತ್ತ/ ಹೆಸರು | ಹಿಂದಿನ ಹೆಸರು |
|---|---|---|
| 35 | ಸಿ. ಕೆ. ವೆಂಕಟರಾಮಯ್ಯ ರಸ್ತೆ | ಬಿಇಎಲ್ ರಸ್ತೆ |
| 36 | ಶ್ಯಾಮಪ್ರಸಾದ್ ಮುಖರ್ಜಿ ಮೇಲ್ಸೇತುವೆ | ಮತ್ತೀಕೆರೆ ಮೇಲ್ಸೇತುವೆ |
| 45 | ಶ್ರೀ ಪಂಡಿತ್ ದೀನದಯಾಳು ಉಪಾಧ್ಯಾಯ ಮೇಲ್ಸೇತುವೆ | ಯಶವಂತಪುರ ಮೇಲ್ಸೇತುವೆ |
| 45 | ಶ್ರೀ ಚಿತ್ರಾಪುರ ವೃತ್ತ | 15ನೇ ಕ್ರಾಸ್, 8ನೇ ಮೇನ್ ಸರ್ಕಲ್ |
| 45 | ಸಂವಿಧಾನ ವೃತ್ತ | ಯಶವಂತಪುರ ಸರ್ಕಲ್ |
| 64 | ಚಿಂತಲಪಲ್ಲಿ ರಾಮಚಂದ್ರರಾವ್ ರಸ್ತೆ | 4ನೇ ಮೇನ್, ಈಜುಕೊಳ ಬಡಾವಣೆ |
| 64 | ರಾಜಾಮಹಲ್ ನಗರ | ರಾಜಾಮಹಲ್ ಗುಟ್ಟಹಳ್ಳಿ |
| 64 | ಭುವನೇಶ್ವರಿ ನಗರ | ಜಬ್ಬಾರ್ ಬ್ಲಾಕ್ |
| 64 | ಶ್ರೀ ಮಾರಮ್ಮ ದೇವಸ್ಥಾನದ ರಸ್ತೆ | 2ನೇ ಮೇನ್, ಪ್ಯಾಲೆಸ್ ಗುಟ್ಟಹಳ್ಳಿ |
| 65 | ಡಾ। ಹೊ. ಶ್ರೀನಿವಾಸಯ್ಯ ರಸ್ತೆ | 6ನೇ ಕ್ರಾಸ್, ಮಲ್ಲೇಶ್ವರ |
| 65 | ಸಾಹಿತ್ಯ ಬಂಧು ಚಿ. ಶ್ರೀನಿವಾಸರಾಜು ರಸ್ತೆ | ಹಳೆಯ ಈಜುಕೊಳ ರಸ್ತೆ, ವಯ್ಯಾಲಿಕಾವಲ್ |
| 65 | ಕೆನರಾ ಯೂನಿಯರ್ ರಸ್ತೆ | 8ನೇ ಮೇನ್, ಮಲ್ಲೇಶ್ವರ |
| 65 | ವೇದಬ್ರಹ್ಮ ಸತ್ಯನಾರಾಯಣ ಶಾಸ್ತ್ರಿ (ಗಂಜ್) ರಸ್ತೆ | ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ |
| 65 | ರವಿ ಕಿರ್ಲೋಸ್ಕರ್ ರಸ್ತೆ | 9ನೇ ಕ್ರಾಸ್, ಮಲ್ಲೇಶ್ವರ |
| 65 | ಸಿ. ಎಂ. ನಾಗರಾಜ್ ರಸ್ತೆ | ಸುಬ್ರಮಣ್ಯ ನಗರ ಮೇನ್ ರೋಡ್ |
| 65 | ಪದ್ಮಶ್ರೀ ದೊರೆಸ್ವಾಮಿ ಅಯ್ಯಂಗಾರ್ ರಸ್ತೆ | 13ನೇ ಕ್ರಾಸ್, ಮಲ್ಲೇಶ್ವರ |
| 65 | ಶ್ರೀ ಶ್ರೀ ಶ್ರೀ ರಾಮಾನುಜಾಚಾರ್ಯ ವೃತ್ತ | 11ನೇ ಕ್ರಾಸ್, ಸಂಪಿಗೆ ರಸ್ತೆ |
| 66 | ಶ್ರೀ ವೀರಸಾವರ್ಕರ್ ರಸ್ತೆ | ರೈಲ್ವೆ ಸಮಾನಾಂತರ ರಸ್ತೆ, ಸುಬ್ರಮಣ್ಯ ನಗರ |
| 66 | ಎನ್. ಎಸ್. ರಾವ್ ರಸ್ತೆ | ಸಂಗೊಳ್ಳಿ ರಾಯಣ್ಣ ಉದ್ಯಾನ ರಸ್ತೆ |









# ಸ್ಮಾರಕಗಳು

“ಅಮರವಾಗುವಿಕೆಯ ಪ್ರಪ್ರಥಮ ರಹಸ್ಯವು ನೆನಪಿಸಿಕೊಳ್ಳಲು
ಅರ್ಹವಾದ ಬದುಕನ್ನು ನಡೆಸುವುದೇ ಆಗಿದೆ.”

–ಬ್ರೂಸ್ ಲೀ

# ಸ್ಮಾರಕಗಳು

• ಸ್ವಾಮಿ ವಿವೇಕಾನಂದರ 153ನೇ ಜನ್ಮದಿನದ ಅಂಗವಾಗಿ ಯಶವಂತಪುರದಲ್ಲಿ ಸ್ವಾಮಿ ವಿವೇಕಾನಂದರ ಪ್ರತಿಮೆ ಅನಾವರಣಗೊಳಿಸಲಾಯಿತು.

• ಡಾ। ಬಿ. ಆರ್. ಅಂಬೇಡ್ಕರ್ ಅವರ 126ನೇ ಜನ್ಮದಿನದ ಅಂಗವಾಗಿ ಯಶವಂತಪುರ ವೃತ್ತಕ್ಕೆ ಸಂವಿಧಾನ ಚೌಕ ಎಂದು ನಾಮಕರಣ ಮಾಡುವ ಜತೆಗೆ ಅಂಬೇಡ್ಕರ್ ಅವರ ಪ್ರತಿಮೆ ಪ್ರತಿಷ್ಠಾಪಿಸಲಾಗಿದೆ.

• ಸ್ವಚ್ಛ ಭಾರತ ಅಭಿಯಾನದ ಮೊದಲನೇ ವಾರ್ಷಿಕೋತ್ಸವದ ಅಂಗವಾಗಿ ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವ ಶ್ರೀ ಡಿ. ವಿ. ಸದಾನಂದಗೌಡ ಅವರು ಸ್ವಚ್ಛ ಭಾರತ ಆಕೃತಿ ಲಾಂಛನ ಉದ್ಘಾಟಿಸಿದರು.







| ವಾರ್ಡ್ | ಸ್ಮಾರಕ | ಸ್ಥಳ |
|---|---|---|
| 35 | ನಾಡಪ್ರಭು ಕೆಂಪೇಗೌಡ | ನಾಡಪ್ರಭು ಕೆಂಪೇಗೌಡ ಉದ್ಯಾನ |
| 35 | ಸ್ವಾಮಿ ವಿವೇಕಾನಂದ | 18ನೇ ಕ್ರಾಸ್ ಕಾಲೇಜು, ಬೇವಿನಮರದ ರಸ್ತೆ |
| 35 | ಡಾ. ರಾಜ್‌ಕುಮಾರ್ | 18ನೇ ಕ್ರಾಸ್, ಮಲ್ಲೇಶ್ವರ, ಸಂಪಿಗೆ ರಸ್ತೆ |
| 35 | ಜಗಜ್ಯೋತಿ ಶ್ರೀ ಬಸವೇಶ್ವರ | ಹೊಸ ಬಿಇಎಲ್ ರಸ್ತೆ, ಜಲದರ್ಶಿನಿ ಲೇಔಟ್ |
| 36 | ನೇತಾಜಿ ಸುಭಾಷ್‌ಚಂದ್ರ ಬೋಸ್ | ಮತ್ತೀಕೆರೆ ವೃತ್ತ |
| 45 | ಡಾ. ಬಿ. ಆರ್. ಅಂಬೇಡ್ಕರ್ | ಯಶವಂತಪುರ ವೃತ್ತ |
| 64 | ಶ್ರೀ ಗುರು ಶಂಕರಾಚಾರ್ಯ | ಬಳ್ಳಾರಿ ರಸ್ತೆ |
| 65 | ರಾಷ್ಟ್ರಕವಿ ಕುವೆಂಪು | ಮಲ್ಲೇಶ್ವರ ವೃತ್ತ, ಮಹಾಕವಿ ಕುವೆಂಪು ರಸ್ತೆ |
| 65 | ಚಂದ್ರಶೇಖರ್ ಆಜಾದ್ | ಚಂದ್ರಶೇಖರ್ ಆಜಾದ್ ಮೈದಾನ, ಮಲ್ಲೇಶ್ವರ |
| 66 | ಸ್ವಾಮಿ ವಿವೇಕಾನಂದ | ಗಂಧದ ಸಾಬೂನು ಕಾರ್ಖಾನೆ, ಮೆಟ್ರೊ ನಿಲ್ದಾಣ |

# ಅರಮನೆ ನಗರ (ವಾರ್ಡ್ ಸಂಖ್ಯೆ 35)

**2**
ಸರ್ಕಾರಿ ಶಾಲೆಗಳು

**12**
ಉದ್ಯಾನಗಳು

**2**
ಆಟದ ಮೈದಾನಗಳು

**4**
ಅಂಗನವಾಡಿ ಕೇಂದ್ರಗಳು

**44**
ಕಲ್ಯಾಣ ಕಾರ್ಯಕ್ರಮದಡಿ ಮನೆಗಳು

**7**
ಸಾರ್ವಜನಿಕ ಶೌಚಾಲಯಗಳು

**1**
ಜಿಮ್

**2**
ಆರೋಗ್ಯ ಚಿಕಿತ್ಸಾ ಕೇಂದ್ರಗಳು

**1**
ಗ್ರಂಥಾಲಯ (ಒಟ್ಟು ಪುಸ್ತಕಗಳ ಸಂಖ್ಯೆ– 15760)

**2**
ಸರ್ಕಾರಿ ಕಾಲೇಜುಗಳು

## ಒಟ್ಟು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (2013–2018)

| | ಆಸ್ಫಾಲ್ಟ್ ರಸ್ತೆ | | | ಸಿ. ಸಿ. ರಸ್ತೆ | | | ಒಳಚರಂಡಿ ರಸ್ತೆ | | |
|---|---|---|---|---|---|---|---|---|---|
| ರಸ್ತೆಗಳ ಒಟ್ಟು ಉದ್ದ (ಕಿ.ಮೀ) | ಆಸ್ಫಾಲ್ಟ್ ರಸ್ತೆ (ಕಿ.ಮೀ) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಆಸ್ಫಾಲ್ಟ್ ರಸ್ತೆ ಉದ್ದ (ಕಿ.ಮೀ) | ಸಿ. ಸಿ. ರಸ್ತೆ (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಸಿ. ಸಿ. ರಸ್ತೆ (ಕಿ.ಮೀ) | ಚರಂಡಿ ಹೂಳು ಎತ್ತಿರುವುದು (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ.) | ಒಟ್ಟು ಚರಂಡಿ ಉದ್ದ (ಕಿ.ಮೀ.) |
| 62.40 | 47.80 | 10.00 | 57.80 | 0.90 | 3.70 | 4.60 | 82.0 | 42.80 | 124.80 |



# ಮತ್ತೀಕೆರೆ (ವಾರ್ಡ್ ಸಂಖ್ಯೆ 36)

**2**
ಸರ್ಕಾರಿ ಶಾಲೆಗಳು

**1**
ಉದ್ಯಾನ

**435***
ಕಲ್ಯಾಣ ಕಾರ್ಯಕ್ರಮದಡಿ ಮನೆಗಳು

**4**
ಅಂಗನವಾಡಿ ಕೇಂದ್ರಗಳು

**6**
ಸಾರ್ವಜನಿಕ ಶೌಚಾಲಯಗಳು


**2**
ಜಿಮ್‌ಗಳು

**2**
ಆರೋಗ್ಯ ಚಿಕಿತ್ಸಾ ಕೇಂದ್ರಗಳು

**1**
ಗ್ರಂಥಾಲಯ (ಒಟ್ಟು ಪುಸ್ತಕಗಳ ಸಂಖ್ಯೆ – 20,585)

## ಒಟ್ಟು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (2013–2018)

| | ಆಸ್ಫಾಲ್ಟ್ ರಸ್ತೆ | | | ಸಿ.ಸಿ. ರಸ್ತೆ | | | ಒಳಚರಂಡಿ ರಸ್ತೆ | | |
|---|---|---|---|---|---|---|---|---|---|
| ರಸ್ತೆಗಳ ಒಟ್ಟು ಉದ್ದ (ಕಿ.ಮೀ) | ಆಸ್ಫಾಲ್ಟ್ ರಸ್ತೆ (ಕಿ.ಮೀ) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಆಸ್ಫಾಲ್ಟ್ ರಸ್ತೆ ಉದ್ದ (ಕಿ.ಮೀ) | ಸಿ. ಸಿ. ರಸ್ತೆ (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಸಿ. ಸಿ. ರಸ್ತೆ (ಕಿ.ಮೀ) | ಚರಂಡಿ ಹೂಳು ಎತ್ತಿರುವುದು (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ.) | ಒಟ್ಟು ಚರಂಡಿ ಉದ್ದ (ಕಿ.ಮೀ.) |
| 34.50 | 11.00 | 19.9 | 30.90 | 2 | 1.60 | 3.60 | 63 | 6 | 69 |



# ಮಲ್ಲೇಶ್ವರಂ (ವಾರ್ಡ್ ಸಂಖ್ಯೆ 45)

**2**
ಸರ್ಕಾರಿ ಶಾಲೆಗಳು

**2**
ಉದ್ಯಾನಗಳು

**2**
ಆಟದ ಮೈದಾನಗಳು

**243***
ಕಲ್ಯಾಣ ಕಾರ್ಯಕ್ರಮದಡಿ ಮನೆಗಳು

**10**
ಅಂಗನವಾಡಿ ಕೇಂದ್ರಗಳು

**11**
ಸಾರ್ವಜನಿಕ ಶೌಚಾಲಯಗಳು

**1**
ಜಿಮ್

**1**
ಆರೋಗ್ಯ ಚಿಕಿತ್ಸಾ ಕೇಂದ್ರ

**1**
ಗ್ರಂಥಾಲಯ
(ಒಟ್ಟು ಪುಸ್ತಕಗಳ ಸಂಖ್ಯೆ – 1,22,831)

## ಒಟ್ಟು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (2013–2018)

| | ಆಸ್‌ಫಾಲ್ಟ್ ರಸ್ತೆ | | | ಸಿ. ಸಿ. ರಸ್ತೆ | | | ಒಳಚರಂಡಿ ರಸ್ತೆ | | |
|---|---|---|---|---|---|---|---|---|---|
| ರಸ್ತೆಗಳ ಒಟ್ಟು ಉದ್ದ (ಕಿ.ಮೀ) | ಆಸ್‌ಫಾಲ್ಟ್ ರಸ್ತೆ (ಕಿ.ಮೀ) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಆಸ್‌ಫಾಲ್ಟ್ ರಸ್ತೆ ಉದ್ದ (ಕಿ.ಮೀ) | ಸಿ. ಸಿ. ರಸ್ತೆ (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಸಿ. ಸಿ. ರಸ್ತೆ (ಕಿ.ಮೀ) | ಚರಂಡಿ ಹೂಳು ಎತ್ತಿರುವುದು (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ.) | ಒಟ್ಟು ಚರಂಡಿ ಉದ್ದ (ಕಿ.ಮೀ.) |
| 39 | 11.90 | 23.70 | 35.60 | 2.90 | 0.50 | 3.40 | 40.80 | 37.20 | 78 |



# ರಾಜಾಮಹಲ್ ನಗರ (ವಾರ್ಡ್ ಸಂಖ್ಯೆ 64)

**2**
ಸರ್ಕಾರಿ ಶಾಲೆಗಳು

**4**
ಉದ್ಯಾನಗಳು

**2**
ಆಟದ ಮೈದಾನಗಳು

**172**
ಕಲ್ಯಾಣ ಕಾರ್ಯಕ್ರಮದಡಿ ಮನೆಗಳು

**6**
ಅಂಗನವಾಡಿ ಕೇಂದ್ರಗಳು

**6**
ಸಾರ್ವಜನಿಕ ಶೌಚಾಲಯಗಳು

**1**
ಜಿಮ್

**1**
ಆರೋಗ್ಯ ಚಿಕಿತ್ಸಾ ಕೇಂದ್ರ

**2**
ಗ್ರಂಥಾಲಯಗಳು (ಒಟ್ಟು ಪುಸ್ತಕಗಳ ಸಂಖ್ಯೆ – 1,23,355)

**1**
ಡಯಾಲಿಸಿಸ್ ಕೇಂದ್ರ

**1**
ಹೆರಿಗೆ ಕೇಂದ್ರ

## ಒಟ್ಟು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (2013–2018)

| | ಆಸ್ಫಾಲ್ಟ್ ರಸ್ತೆ | | | ಸಿ. ಸಿ. ರಸ್ತೆ | | | ಒಳಚರಂಡಿ ರಸ್ತೆ | | |
|---|---|---|---|---|---|---|---|---|---|
| ರಸ್ತೆಗಳ ಒಟ್ಟು ಉದ್ದ (ಕಿ.ಮೀ) | ಆಸ್ಫಾಲ್ಟ್ ರಸ್ತೆ (ಕಿ.ಮೀ) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಆಸ್ಫಾಲ್ಟ್ ರಸ್ತೆ ಉದ್ದ (ಕಿ.ಮೀ) | ಸಿ. ಸಿ. ರಸ್ತೆ (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಸಿ. ಸಿ. ರಸ್ತೆ (ಕಿ.ಮೀ) | ಚರಂಡಿ ಹೂಳು ಎತ್ತಿರುವುದು (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ.) | ಒಟ್ಟು ಚರಂಡಿ ಉದ್ದ (ಕಿ.ಮೀ.) |
| **28.10** | **22** | **Nil** | **22** | **5.60** | **0.50** | **6.10** | **38.20** | **5.30** | **43.50** |



# ಕಾಡುಮಲ್ಲೇಶ್ವರ (ವಾರ್ಡ್ ಸಂಖ್ಯೆ 65)

**5**
ಸರ್ಕಾರಿ ಶಾಲೆಗಳು

**2**
ಉದ್ಯಾನಗಳು

**2**
ಆಟದ ಮೈದಾನಗಳು

**252**
ಕಲ್ಯಾಣ ಕಾರ್ಯಕ್ರಮದಡಿ ಮನೆಗಳು

**8**
ಸಾರ್ವಜನಿಕ ಶೌಚಾಲಯಗಳು

**2**
ಜಿಮ್‌ಗಳು

**2**
ಆರೋಗ್ಯ ಚಿಕಿತ್ಸಾ ಕೇಂದ್ರಗಳು

**3**
ಗ್ರಂಥಾಲಯಗಳು (ಒಟ್ಟು ಪುಸ್ತಕಗಳ ಸಂಖ್ಯೆ – 2,63,893)

**1**
ಸರ್ಕಾರಿ ಕಾಲೇಜು

## ಒಟ್ಟು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (2013–2018)

| | ಆಸ್‌ಫಾಲ್ಟ್ ರಸ್ತೆ | | | ಸಿ. ಸಿ. ರಸ್ತೆ | | | ಒಳಚರಂಡಿ ರಸ್ತೆ | | |
|---|---|---|---|---|---|---|---|---|---|
| ರಸ್ತೆಗಳ ಒಟ್ಟು ಉದ್ದ (ಕಿ.ಮೀ) | ಆಸ್‌ಫಾಲ್ಟ್ ರಸ್ತೆ (ಕಿ.ಮೀ) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಆಸ್‌ಫಾಲ್ಟ್ ರಸ್ತೆ ಉದ್ದ (ಕಿ.ಮೀ) | ಸಿ. ಸಿ. ರಸ್ತೆ (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಸಿ.ಸಿ. ರಸ್ತೆ (ಕಿ.ಮೀ) | ಚರಂಡಿ ಹೂಳು ಎತ್ತಿರುವುದು (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ.) | ಒಟ್ಟು ಚರಂಡಿ ಉದ್ದ (ಕಿ.ಮೀ.) |
| 42 | 36 | 2.50 | 38.50 | 2.50 | 1 | 3.50 | 71.50 | 3 | 74.50 |



# ಸುಬ್ರಮಣ್ಯ ನಗರ ವಾರ್ಡ್ (ವಾರ್ಡ್ ಸಂಖ್ಯೆ 66)

**2**
ಉದ್ಯಾನಗಳು

**2**
ಆಟದ ಮೈದಾನಗಳು

**136**
ಕಲ್ಯಾಣ ಕಾರ್ಯಕ್ರಮದಡಿ ಮನೆಗಳು

**3**
ಅಂಗನವಾಡಿ ಕೇಂದ್ರಗಳು

**2**
ಸಾರ್ವಜನಿಕ ಶೌಚಾಲಯಗಳು

**2**
ಜಿಮ್‌ಗಳು

**1**
ಗ್ರಂಥಾಲಯ (ಒಟ್ಟು ಪುಸ್ತಕಗಳ ಸಂಖ್ಯೆ – 25,106)

## ಒಟ್ಟು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (2013–2018)

| | ಆಸ್‌ಫಾಲ್ಟ್ ರಸ್ತೆ | | | ಸಿ. ಸಿ. ರಸ್ತೆ | | | ಒಳಚರಂಡಿ ರಸ್ತೆ | | |
|---|---|---|---|---|---|---|---|---|---|
| ರಸ್ತೆಗಳ ಒಟ್ಟು ಉದ್ದ (ಕಿ.ಮೀ) | ಆಸ್‌ಫಾಲ್ಟ್ ರಸ್ತೆ (ಕಿ.ಮೀ) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಆಸ್‌ಫಾಲ್ಟ್ ರಸ್ತೆ ಉದ್ದ (ಕಿ.ಮೀ) | ಸಿ. ಸಿ. ರಸ್ತೆ (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಸಿ. ಸಿ. ರಸ್ತೆ (ಕಿ.ಮೀ) | ಚರಂಡಿ ಹೂಳು ಎತ್ತಿರುವುದು (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ.) | ಒಟ್ಟು ಚರಂಡಿ ಉದ್ದ (ಕಿ.ಮೀ.) |
| 23 | 15.80 | 4.20 | 20 | 2.50 | 0.5 | 3 | 39.82 | 5.38 | 45.20 |



# ಗಾಯತ್ರಿನಗರ (ವಾರ್ಡ್ ಸಂಖ್ಯೆ 76)

**2** ಬಿಬಿಎಂಪಿ ಶಾಲೆಗಳು

**1** ಉದ್ಯಾನ

**88** ಕಲ್ಯಾಣ ಕಾರ್ಯಕ್ರಮದಡಿ ಮನೆಗಳು

**2** ಅಂಗನವಾಡಿ ಕೇಂದ್ರಗಳು

**3** ಸಾರ್ವಜನಿಕ ಶೌಚಾಲಯಗಳು

**1** ಆರೋಗ್ಯ ಚಿಕಿತ್ಸಾ ಕೇಂದ್ರ

**1** ಗ್ರಂಥಾಲಯ (ಒಟ್ಟು ಪುಸ್ತಕಗಳ ಸಂಖ್ಯೆ – 16,860)

**4** ಚಿತಾಗಾರ/ ರುದ್ರಭೂಮಿ

**1** ಬಿಬಿಎಂಪಿ ಕಾಲೇಜು

## ಒಟ್ಟು ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ (2013–2018)

| | ಆಸ್ಫಾಲ್ಟ್ ರಸ್ತೆ | | | ಸಿ. ಸಿ. ರಸ್ತೆ | | | ಒಳಚರಂಡಿ ರಸ್ತೆ | | |
|---|---|---|---|---|---|---|---|---|---|
| ರಸ್ತೆಗಳ ಒಟ್ಟು ಉದ್ದ (ಕಿ.ಮೀ) | ಆಸ್ಫಾಲ್ಟ್ ರಸ್ತೆ (ಕಿ.ಮೀ) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಆಸ್ಫಾಲ್ಟ್ ರಸ್ತೆ ಉದ್ದ (ಕಿ.ಮೀ) | ಸಿ. ಸಿ. ರಸ್ತೆ (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ) | ಒಟ್ಟು ಸಿ. ಸಿ. ರಸ್ತೆ (ಕಿ.ಮೀ) | ಚರಂಡಿ ಹೂಳು ಎತ್ತಿರುವುದು (ಕಿ.ಮೀ.) | ಕೆಲಸ ನಡೆಯುತ್ತಿರುವುದು (ಕಿ.ಮೀ.) | ಒಟ್ಟು ಚರಂಡಿ ಉದ್ದ (ಕಿ.ಮೀ.) |
| **21.00** | **17.30** | **0.70** | **18.00** | **1.00** | **2.00** | **3.00** | **38.20** | **1.80** | **40.00** |





'ಭಾರತರತ್ನ' ಶ್ರೀ ಸಿ. ಎನ್. ಆರ್. ರಾವ್ ಅವರಿಗೆ ಸನ್ಮಾನ



ಇಂಗ್ಲೆಂಡ್ ಪ್ರಧಾನಮಂತ್ರಿ ಥೆರೆಸಾ ಮೇ ಅವರು ಬೆಂಗಳೂರಿಗೆ ಭೇಟಿ ನೀಡಿದ್ದಾಗ

प्रधान मंत्री

Prime Minister

**MESSAGE**

I am happy to learn about the initiatives for Swachh Bharat taken by the citizens of Malleswaram, Bengaluru.

I am also pleased to note that citizens who have been working on these initiatives will gather on the occasion of Shri Atal Bihari Vajpayee's birthday, on December 25th, 2015, to mark "Good Governance Day."

On this occasion, I compliment Dr. Ashwathnarayan for leading this effort, and extend my best wishes to the citizens of Malleswaram, for their mission of "Smart Swachh Malleswaram."

(Narendra Modi)

**New Delhi**
**22 December, 2015**

ಸನ್ಮಾನ್ಯ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ನಮ್ಮನ್ನು ಅಭಿನಂದಿಸಿ ಮತ್ತು ಮಲ್ಲೇಶ್ವರ ನಾಗರಿಕರನ್ನು ಹಾರೈಸಿ ಕಳುಹಿಸಿರುವ ಸಂದೇಶ ಪತ್ರ.

**ಡಾ। ಅಶ್ವಥ್‌ನಾರಾಯಣ್ ಸಿ. ಎನ್.**

ಶಾಸಕರು, ಮಲ್ಲೇಶ್ವರ, ಬೆಂಗಳೂರು

**@drashwathnarayan**

**Dr Ashwath Narayan**

**@drashwathcn**

**@drashwathcn**

**Dr Ashwath Narayan**

**drashwath.in**

# ಅಭಿನಂದನೆಗಳು

# ಮಲ್ಲೇಶ್ವರ

